ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಅಕ್ಟೋಬರ್ 25, 2021

ಸಂಪುಟ : 48 ಸಂಚಿಕೆ : 164 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ. : 4.00 www.janathavani.com janathavani@mac.com



## ಶೋಷಿತರ ದನಿಯಾಗಿದ್ದ ಹೆಚ್‌ಕೆಆರ್

### ಚಳವಳಿ ಮೂಲಕ ಜನ ಮಾನಸದಲ್ಲಿ ಅಚ್ಚಳಿಯದೇ ಉಳಿದಿದ್ದಾರೆ: ಅನಂತ ಸುಬ್ಬರಾವ್

ದಾವಣಗೆರೆ, ಅ.24- ಕಾರ್ಮಿಕ ಮುಖಂಡ ದಿ. ಹೆಚ್.ಕೆ. ರಾಮಚಂದ್ರಪ್ಪ ಅವರು ದುರ್ಬಲರು, ಶೋಷಿತರ ಪರ ನಡೆಸಿದ ಚಳವಳಿಗಳ ಮೂಲಕ ಜನ ಮಾನಸದಲ್ಲಿ ಅಚ್ಚಳಿಯದೇ ಉಳಿದಿದ್ದಾರೆ ಎಂದು ಎಐಟಿಯುಸಿ ರಾಜ್ಯಾಧ್ಯಕ್ಷ ಹೆಚ್. ವಿ. ಅನಂತಸುಬ್ಬರಾವ್ ಹೇಳಿದರು.

ಎಐಟಿಯುಸಿ, ಸಿಪಿಐ ಜಿಲ್ಲಾ ಘಟಕಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ದಿ. ಹೆಚ್.ಕೆ. ರಾಮಚಂದ್ರಪ್ಪ ಶ್ರದ್ಧಾಂಜಲಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹೆಚ್‌ಕೆಆರ್ ಮಾಡಿದ ಹೋರಾಟಗಳು ಮುಂದಿನ ಪೀಳಿಗೆಗೆ ಸ್ಫೂರ್ತಿದಾಯಕವಾಗಿದ್ದು, ಅನೇಕ ಚಳವಳಿಗಳ ಮೂಲಕ ಇನ್ನೂ ಜೀವಂತವಾಗಿದ್ದಾರೆ ಎಂದರು.

ಹೆಚ್‌ಕೆಆರ್ ಅವರಲ್ಲಿ ತಾಳ್ಮೆ ಗುಣ ಇತ್ತು. ಶಿಸ್ತಿನ ಸಿಪಾಯಿಯಾಗಿದ್ದ ಅವರು, ಕೊನೆ ಉಸಿರು ಇರುವ ತನಕ ಶೋಷಿತರು, ದುರ್ಬಲರು ಮತ್ತು ದೀನ ದಲಿತರ ಪರ ಹೋರಾಟ ನಡೆಸಿದರು. ಅವರ ಕೆಲಸದ ಬದ್ಧತೆ ಮೆಚ್ಚವಂತಹದ್ದು ಎಂದು ಹೆಚ್‌ಕೆಆರ್ ಸಾಧನೆಗಳನ್ನು ಮೆಲುಕು ಹಾಕಿದರು.

ಕೆಲವರು ಬದುಕಿರುವಾಗಲೇ ಸತ್ತಂತೆ ಇರುತ್ತಾರೆ. ಮತ್ತೆ ಕೆಲವರು ಅವರ ಸಾಧನೆಗಳ ಮೂಲಕ ಜನಮಾನಸದಲ್ಲಿ ಉಳಿಯುತ್ತಾರೆ. ಅಂತವರ ಸಾಲಿಗೆ ಹೆಚ್.ಕೆ. ರಾಮಚಂದ್ರಪ್ಪ ಸೇರುತ್ತಾರೆ ಎಂದರು.

ಸಿಪಿಐ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್ ಮಾತನಾಡಿ, ಪ್ರಸ್ತುತ ದುಡಿಯುವ ವರ್ಗದವರ ಪರ ಹೋರಾಟಗಳು ಬಲಿಷ್ಠವಾಗಬೇಕಾಗಿದೆ. ರಾಮಚಂದ್ರಪ್ಪ ಅವರು ಶೋಷಿತರ ಪರ ನಡೆಸಿದ ಹೋರಾಟಗಳನ್ನು ಮುಂದುವರೆಸಿಕೊಂಡು ಹೋಗುವ ಪ್ರತಿಜ್ಞೆ ಮಾಡಬೇಕಾಗಿದೆ ಎಂದು ಹೇಳಿದರು.

ದೇಶದಲ್ಲಿ ಬಡತನ ಕಾಡುತ್ತಿದ್ದು, ಹಸಿವಿನ ಸೂಚ್ಯಂಕ ಹೆಚ್ಚಾಗುತ್ತಿದೆ. ಆದರೆ ಬಂಡವಾಳಶಾಹಿಗಳ ಆದಾಯ ಮಾತ್ರ ಇಳಿಕೆಯಾಗುತ್ತಿಲ್ಲ. ಇದಕ್ಕೆ ಕಾರಣ ಕೇಂದ್ರ ಸರ್ಕಾರದ ಶ್ರೀಮಂತರ ಪರವಾದ ನೀತಿಗಳು ಎಂದು ಹೇಳಿದರು.

ಬಿಜೆಪಿ ಮತ್ತು ಆರ್‌ಎಸ್‌ಎಸ್ ಸಿದ್ಧಾಂತಗಳನ್ನು (3ನೇ ಪುಟಕ್ಕೆ)

## ಮಹಿಳಾ ಪೊಲೀಸರ ಸಂಖ್ಯೆ ಡಬಲ್

### 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರಶಂಸೆ

ನವದೆಹಲಿ, ಅ. 24 – ಪೊಲೀಸ್ ಸಿಬ್ಬಂದಿಯಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಿರುವುದಕ್ಕೆ ಪ್ರಶಂಸಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, 2014ರಿಂದ 2020ರ ನಡುವೆ ಮಹಿಳಾ ಪೊಲೀಸರ ಸಂಖ್ಯೆ ಎರಡು ಪಟ್ಟು ಹೆಚ್ಚಾಗಿದೆ ಎಂದಿದ್ದಾರೆ.

ಮಾಸಿಕ 'ಮನ್ ಕಿ ಬಾತ್' ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ಅವರು, ಸೈನ್ಯ ಹಾಗೂ ಪೊಲೀಸ್ ವಲಯದಲ್ಲಿ ಪುರುಷರೇ ಇರುತ್ತಾರೆ ಎಂಬುದು ಹಿಂದಿನ ಮಾತಾಯಿತು. ಬ್ಯೂರೋ ಆಫ್ ಪೊಲೀಸ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್ ಅಂಕಿ-ಅಂಶಗಳ ಪ್ರಕಾರ 2014ರಲ್ಲಿ 105 ಲಕ್ಷ ಇದ್ದ ಮಹಿಳಾ ಪೊಲೀಸ್ ಸಿಬ್ಬಂದಿ ಸಂಖ್ಯೆ ಈಗ 2.15 ಲಕ್ಷಕ್ಕೆ ಏರಿಕೆಯಾಗಿದೆ ಎಂದಿದ್ದಾರೆ.

ಕಳೆದ ಏಳು ವರ್ಷಗಳಲ್ಲಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳಲ್ಲೂ ಸಹ ಮಹಿಳೆಯರ ಸಂಖ್ಯೆ ಎರಡು ಪಟ್ಟು ಹೆಚ್ಚಾಗಿದೆ ಎಂದು ಮೋದಿ ತಿಳಿಸಿದ್ದಾರೆ.



ಕೋಬ್ರಾ ಬೆಟಾಲಿಯನ್‌ನಲ್ಲಿ ಸೇರ್ಪಡೆಯಾಗಲು ಮಹಿಳೆಯರಿಗೆ ಕಾಡಿನಲ್ಲಿ ವಿಶೇಷ ಕಮಾಂಡೋಗಳ ತರಬೇತಿ ನೀಡಲಾಗುತ್ತಿದೆ. ಮೆಟ್ರೋ ನಿಲ್ದಾಣ, ವಿಮಾನ ನಿಲ್ದಾಣ ಹಾಗೂ ಸರ್ಕಾರಿ ಕಚೇರಿಗಳಲ್ಲೂ ಭದ್ರತಾ ಸಿಬ್ಬಂದಿಯಾಗಿ ಮಹಿಳೆಯರು ಕಂಡು ಬರುವುದು ಹೆಚ್ಚಾಗುತ್ತಿದೆ ಎಂದು ಪ್ರಧಾನಿ ತಿಳಿಸಿದ್ದಾರೆ.

ಇದು ನಮ್ಮ ಪೊಲೀಸ್ ಪಡೆ ಹಾಗೂ ಸಮಾಜದ ನೈತಿಕತೆಯಲ್ಲಿ ಸಕಾರಾತ್ಮಕ ಪರಿಣಾಮ ಬೀರಿದೆ. ಮಹಿಳಾ ಭದ್ರತಾ ಸಿಬ್ಬಂದಿ ಉಪಸ್ಥಿತರಿರುವುದು, ಜನರಲ್ಲಿ ವಿಶೇಷವಾಗಿ ಮಹಿಳೆಯರಲ್ಲಿ ಸಹಜ ವಿಶ್ವಾಸ ತರುತ್ತದೆ. ಸಹಜವಾಗಿ ಅವರ ಜೊತೆ ಸಂಪರ್ಕಿತರಾಗುತ್ತಾರೆ. ಮಹಿಳಾ ಸಂವೇದನೆಯ ಕಾರಣದಿಂದಾಗಿ ಜನರು ಅವರನ್ನು ಹೆಚ್ಚು ನಂಬುತ್ತಾರೆ ಎಂದು ಮೋದಿ ಹೇಳಿದ್ದಾರೆ.

ಮಹಿಳಾ ಪೊಲೀಸರು ಮಹಿಳೆಯರಿಗೆ ಮಾದರಿಯಾಗಿದ್ದಾರೆ ಎಂದಿರುವ ಪ್ರಧಾನಿ, ಶಾಲೆಗಳು ಪುನರಾರಂಭವಾದ ನಂತರ ಮಹಿಳಾ ಪೊಲೀಸರು ಶಾಲೆಗಳಿಗೆ ತೆರಳಿ ವಿದ್ಯಾರ್ಥಿನಿಯರ ಜೊತೆ ಸಂವಾದ ನಡೆಸಬೇಕು. ಇದು ನೂತನ ಪೀಳಿಗೆಗೆ ಹೊಸ ಮಾರ್ಗ ತೋರಿಸಿದಂತಾಗುತ್ತದೆ ಎಂದು ಕಿವಿಮಾತು ಹೇಳಿದ್ದಾರೆ.

ಮುಂದಿನ ದಿನಗಳಲ್ಲಿ ಮಹಿಳೆಯರು ಇನ್ನಷ್ಟು ಸಂಖ್ಯೆಯಲ್ಲಿ ಪೊಲೀಸ್ ಪಡೆಗಳಿಗೆ ಸೇರ್ಪಡೆಯಾಗಲಿದ್ದಾರೆ ಎಂದು ಆಶಿಸಿರುವ ಪ್ರಧಾನಿ, ಮಹಿಳೆಯರು ನೂತನ ಯುಗದ ಪೊಲೀಸ್ ಕಾರ್ಯದಲ್ಲಿ ಮುಂಚೂಣಿಯಲ್ಲಿರಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

## ಚುನಾವಣೆ ನಂತರ ನಾವು ವಾಲ್ಮೀಕಿ ನಾಯಕರಾಗಬೇಕು

ಕೊಟ್ಟೂರು, ಅ.24- ಸಾಂಸ್ಕೃತಿಕ ನಾಯಕರ ಹೆಸರಿನಲ್ಲಿ ಆಯಾ ಜಾತಿಗಳು ಜಾಗೃತವಾಗುತ್ತಿದ್ದು, ವಾಲ್ಮೀಕಿ ನಾಯಕ ಸಮಾಜದವರು ಮಹರ್ಷಿ ವಾಲ್ಮೀಕಿಯವರ ಹೆಸರಿನಲ್ಲಿ ಜಾಗೃತರಾಗಬೇಕಿದೆ ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಕರೆ ನೀಡಿದರು.



ವಾಲ್ಮೀಕಿ ನಾಯಕ ಸಮಾಜವನ್ನು ಓಟ್ ಬ್ಯಾಂಕ್ ರಾಜಕಾರಣಕ್ಕೆ ಬಳಸಿಕೊಳ್ಳಲಾಗುತ್ತಿದ್ದು, ಚುನಾವಣೆಯಲ್ಲಿ ರಾಜಕೀಯ ಮಾಡಬೇಕು, ಚುನಾವಣೆ ಮುಗಿದ ನಂತರ ನಾವೆಲ್ಲಾ ವಾಲ್ಮೀಕಿ ನಾಯಕರಾಗಬೇಕೇ ವಿನಃ ರಾಜಕಾರಣವೇ ಜೀವನವಾಗಬಾರದು.

-ಶ್ರೀ ಪ್ರಸನ್ನಾನಂದ ಸ್ವಾಮೀಜಿ
ವಾಲ್ಮೀಕಿ ಗುರುಪೀಠ, ರಾಜನಹಳ್ಳಿ

ಪಟ್ಟಣದ ಬಾಲಾಜಿ ಕಲ್ಯಾಣ ಮಂಟಪದಲ್ಲಿ ವಾಲ್ಮೀಕಿ ಸರ್ಕಾರಿ ನೌಕರರ ತಾಲ್ಲೂಕು ಸಂಘದ ಉದ್ಘಾಟನೆ ಹಾಗೂ ಪದಗ್ರಹಣ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಪರಿಶಿಷ್ಟ ಪಂಗಡದ ಪಟ್ಟಿಗೆ 50 ಬುಡಕಟ್ಟು ಸಮುದಾಯಗಳನ್ನು ಸೇರಿಸಿ, ಶೇ. 3 ರಷ್ಟು ಮೀಸಲಾತಿ ನೀಡಲಾಗಿದ್ದು, ಈಗ ಜನಸಂಖ್ಯೆ ಹೆಚ್ಚಳವಾಗಿದ್ದು, ಮೀಸಲಾತಿ ಹೆಚ್ಚಳ ವಿಚಾರದಲ್ಲಿ ರಾಜ್ಯ ಸರ್ಕಾರ ಮೂಗಿಗೆ ತುಪ್ಪ ಸವರುವ ಕೆಲಸ ಮಾಡುತ್ತಿದೆ, ಸಮಿತಿ, ಉಪಸಮಿತಿ ಮಾಡುವುದರಿಂದ ಮೀಸಲಾತಿ ನೀಡದೇ ಕಾಲಹರಣವಾಗುತ್ತಿದ್ದು, ರಾಜ್ಯದಲ್ಲಿ 4ನೇ ಅತಿ ದೊಡ್ಡ ಸಮಾಜವಾದ ವಾಲ್ಮೀಕಿ ನಾಯಕರು 50 ಲಕ್ಷ ಜನರಿದ್ದು, ಸರ್ಕಾರ ಶೇ 7.5 ಮೀಸಲಾತಿ ನೀಡಲೇ ಬೇಕು. ಇಲ್ಲವಾದರೆ ನಮ್ಮ ಸಮಾಜದ ಶಕ್ತಿಯನ್ನು ನಿಮಗೆ ತೋರಿಸುವ ಮೂಲಕ ಮುಂಬರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಸರ್ಕಾರವನ್ನು ಎಚ್ಚರಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಉಜ್ಜಯಿನಿಯ ಜ್ಞಾನ ಗುರುಪೀಠದ ಕಾರ್ಯದರ್ಶಿ ಎಂ.ಎಂ.ಜೆ. ಹರ್ಷವರ್ಧನ, ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ (2ನೇ ಪುಟಕ್ಕೆ)

## ಪ್ರವರ್ಗ-1ರ ಜಾತಿಗಳು ಸಂಘಟಿತರಾಗಲಿ



ದಾವಣಗೆರೆ, ಅ. 23- ಪ್ರವರ್ಗ 1ರಡಿಯಲ್ಲಿ ಬರುವ 95 ಜಾತಿಗಳು, 171 ಉಪ ಜಾತಿಗಳು ಸಂಘಟಿತರಾಗಿ, ಈಗಿರುವ ಶೇ.4ರಷ್ಟು ಮೀಸಲಾತಿ ಉಳಿಸಿಕೊಳ್ಳುವ ಹಾಗೂ ಮೀಸಲಾತಿಯನ್ನು ಶೇ.10ಕ್ಕೆ ಹೆಚ್ಚಿಸಿಕೊಳ್ಳಲು ಹೋರಾಟಕ್ಕೆ ಮುಂದಾಗದಿದ್ದರೆ ಮತ್ತಷ್ಟು ತುಳಿತಕ್ಕೆ ಒಳಗಾಗಬೇಕಾಗುತ್ತದೆ ಎಂದು ಕರ್ನಾಟಕ ಪ್ರವರ್ಗ-1 ಜಾತಿಗಳ ಒಕ್ಕೂಟದ ರಾಜ್ಯಾಧ್ಯಕ್ಷ ಡಿ.ಟಿ.ಶ್ರೀನಿವಾಸ್ ಹೇಳಿದರು.

**ಪ್ರವರ್ಗ-1 ಜಾತಿಗಳ ಒಕ್ಕೂಟದ ರಾಜ್ಯಾಧ್ಯಕ್ಷ ಡಿ.ಟಿ.ಶ್ರೀನಿವಾಸ್**

ಕರ್ನಾಟಕ ರಾಜ್ಯ ಪ್ರವರ್ಗ-1 ಜಾತಿಗಳ ಒಕ್ಕೂಟ ಹಾಗೂ ದಾವಣಗೆರೆ ಜಿಲ್ಲಾ ಪ್ರವರ್ಗ-1 ಜಾತಿಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಭಾನುವಾರ ನಗರದ ಉದಯ ಮಾಲ್ ಕನ್ವೆನ್ಷನ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ ಜಾಗೃತಿ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಅನೇಕ ಪ್ರಬಲ ಜಾತಿಗಳು ಮೀಸಲಾತಿಗಾಗಿ ಹೋರಾಟ ನಡೆಸುತ್ತಿವೆ. ಪ್ರವರ್ಗ 1ಕ್ಕೆ ಪ್ರತ್ಯೇಕವಾಗಿ ಮೀಸಲಾತಿ ನೀಡಿದರೆ ನಮ್ಮ ಅಸ್ತಿತ್ವ ನಾವು ರೂಪಿಸಿಕೊಳ್ಳಬಹುದು. ಕಳೆದ 75 ವರ್ಷಗಳಿಂದ ತುಳಿತಕ್ಕೆ ಒಳಗಾಗಿದ್ದೇವೆ. ಇನ್ನಾದರೂ ಎಚ್ಚೆತ್ತುಕೊಳ್ಳಬೇಕಿದೆ. ಮೀಸಲಾತಿ ಹೆಚ್ಚಳದ ಹೋರಾಟಕ್ಕಾಗಿ ಗ್ರಾಮ, ಹೋಬಳಿ, ತಾಲ್ಲೂಕು ಹಾಗೂ ಜಿಲ್ಲಾ ಹಂತಗಳಲ್ಲಿ ಸಂಘಟನೆ ನಡೆಸಿ, ಬೃಹತ್ ಶಕ್ತಿ ಪ್ರದರ್ಶನ ನಡೆಸುವ ಅಗತ್ಯವಿದೆ ಎಂದು ಹೇಳಿದರು.

ನಮಗೆ ಮೀಸಲಾತಿ ಹೆಚ್ಚಿಸಿದರೆ, ಪ್ರಬಲ ಜಾತಿಗಳ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ ಎಂಬ ಉದ್ದೇಶದಿಂದ ಯಾವೊಬ್ಬ ಶಾಸಕರು, ಸಂಸದರು ಮೀಸಲಾತಿ ಬಗ್ಗೆ ದನಿ ಎತ್ತುತ್ತಿಲ್ಲ. ಜಾತಿಗಳ ಸೇರ್ಪಡೆ, ಮಾರ್ಪಾಡು, ಬದಲಾವಣೆ ಮಾಡಿ ನಮ್ಮ ಸಮಾಜ ಮುಂದೆ ತರಲು ಯಾರೂ ಧೈರ್ಯ ಮಾಡುತ್ತಿಲ್ಲ. ಆದ್ದರಿಂದ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ 224 ಸ್ಥಾನಗಳ ಪೈಕಿ ಕನಿಷ್ಠ 15 ಸ್ಥಾನಗಳಿಂದಾದರೂ ನಮ್ಮ ಜನ ಚುನಾಯಿತರಾಗಬೇಕಿದೆ. ಆಗ ಮೀಸಲಾತಿ ಹೋರಾಟಕ್ಕೆ ಶಕ್ತಿ (3ನೇ ಪುಟಕ್ಕೆ)

## ಪೆಟ್ರೋಲ್, ಡೀಸೆಲ್ ಹೆಚ್ಚಳ

ನವದೆಹಲಿ, ಅ. 24 – ಭಾನುವಾರ ಸತತ ಐದನೇ ಬಾರಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ತಲಾ 35 ಪೈಸೆ ಹೆಚ್ಚಿಸಲಾಗಿದೆ. ಅಕ್ಟೋಬರ್ 18 ಹಾಗೂ 19ರಂದು ತೈಲ ಬೆಲೆಯಲ್ಲಿ ಬದಲಾವಣೆ ಮಾಡಿರಲಿಲ್ಲ. ಅದಕ್ಕೂ ಮುಂಚೆ ನಾಲ್ಕು ದಿನ ಸತತ ಬೆಲೆ ಏರಿಕೆ ಮಾಡಲಾಗಿತ್ತು. ಸೆಪ್ಟೆಂಬರ್ 28ರ ನಂತರ 21 ಬಾರಿ ಪೆಟ್ರೋಲ್ ಬೆಲೆ ಏರಿಕೆ ಮಾಡಲಾಗಿದೆ. ಸೆಪ್ಟೆಂಬರ್ 24ರ ನಂತರ 24 ಬಾರಿ ಡೀಸೆಲ್ ಬೆಲೆ ಏರಿಕೆ ಮಾಡಲಾಗಿದೆ.

## ಶಾರುಕ್ ಪುತ್ರನ ಬಿಡಲು ಲಂಚ

ಮುಂಬೈ, ಅ. 24 – ಮಾದಕ ಪ್ರಕರಣದಲ್ಲಿ ಬಂಧಿತ ಬಾಲಿವುಡ್ ತಾರೆ ಶಾರುಕ್ ಖಾನ್ ಪುತ್ರ ಆರ್ಯನ್ ಖಾನ್ ಬಿಡಲು ಮಾದಕ ನಿಯಂತ್ರಣ ದಳ (ಎನ್.ಸಿ.ಬಿ.) ಅಧಿಕಾರಿಗಳು 25 ಕೋಟಿ ರೂ. ಲಂಚ ಕೇಳಿ (3ನೇ ಪುಟಕ್ಕೆ)

## ಭಾರತ ದೇಶದ ಇತಿಹಾಸಕ್ಕೆ ಸಾವಿಲ್ಲ

### ಹರಿಹರದಲ್ಲಿ ಗಣವೇಷಧಾರಿಗಳ ಅದ್ದೂರಿ ಪಥಸಂಚಲನ



ಹರಿಹರ, ಅ.24- ದಸರಾ ಹಬ್ಬದ ಅಂಗವಾಗಿ ರಾಷ್ಟ್ರೀಯ ಸ್ವಯಂ ಸೇವಾ ಸಂಘದ ವತಿಯಿಂದ ಭಾನುವಾರ ಪೂರ್ಣ ಗಣವೇಷದೊಂದಿಗೆ ಪಥಸಂಚಲನ ಅದ್ದೂರಿಯಾಗಿ ನಡೆಯಿತು.

ಹೆಚ್. ಶಿವಪ್ಪ ವೃತ್ತದ ಪೇಟೆ ಆಂಜನೇಯ ದೇವಸ್ಥಾನದಿಂದ ಆರಂಭಗೊಂಡ ಪಥ ಸಂಚಲನವು ಮರಾಠ ಗಲ್ಲಿ, ಹವಳದಪೇಟೆ, ದೇವಸ್ಥಾನ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಶಿವಮೊಗ್ಗ ರಸ್ತೆ, ಹೈಸ್ಕೂಲ್ ಬಡಾವಣೆ, ರಾಜರಾಮ್ ಕಾಲೋನಿ, ಕಾಳಿದಾಸ ನಗರ, ಪ್ರಶಾಂತ್ ನಗರದಲ್ಲಿ ಸಂಚರಿಸಿ ಡಿ.ಆರ್.ಎಂ. ಶಾಲೆ ಮೈದಾನದಲ್ಲಿ ಕೊನೆಗೊಂಡಿತು.

ಶಿವಮೊಗ್ಗ ಶಾರೀರಿಕ ಪ್ರಮುಖ ವಿಶ್ವನಾಥ್ ಹರೀಶಿ ಈ ಸಂದರ್ಭದಲ್ಲಿ ಮಾತನಾಡುತ್ತಾ, ಹರಿಹರೇಶ್ವರ ದೇವಸ್ಥಾನದಲ್ಲಿನ ಹರಿ ಹಾಗೂ ಹರ ಒಂದೇ ಆದಂತೆ ರಾಷ್ಟ್ರೀಯತೆ ಹಾಗೂ ಹಿಂದುತ್ವದ ಹೆಸರೂ ಸಹ ಒಂದೇ ಎಂದು ಹೇಳಿದರು. ಭಾರತವನ್ನು ಬೆಳಕು ಕೊಡುವ ದೇಶ ಎನ್ನಲಾಗುತ್ತದೆ. ಭಾರತದ ಇತಿಹಾಸ ಕ್ಕೆ ಸಾವೇ ಇಲ್ಲ. (3ನೇ ಪುಟಕ್ಕೆ)

## ಶಿವಮೊಗ್ಗ ಪ್ರಥಮ, ದಕ್ಷಿಣ ಕನ್ನಡ ಜಿಲ್ಲೆಗೆ ದ್ವಿತೀಯ ಸ್ಥಾನ

### ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ತೆರೆ, ಯಶಸ್ವಿಯಾದ ದೇವನಗರಿ ಆತಿಥ್ಯ





ದಾವಣಗೆರೆ, ಅ.24- ನಗರದಲ್ಲಿ ಮೂರು ದಿನಗಳ ಕಾಲ ನಡೆದ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟ ಇಂದು ಅಂತಿಮ ತೆರೆ ಕಂಡಿತು.

ಶಿವಮೊಗ್ಗ ಜಿಲ್ಲೆ ಪ್ರಥಮ ಸ್ಥಾನದೊಂದಿಗೆ ಸಮಗ್ರ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡರೆ, ದಕ್ಷಿಣ ಕನ್ನಡ ಜಿಲ್ಲೆ ದ್ವಿತೀಯ ಸ್ಥಾನ ಪಡೆಯಿತು. ನಗರದ ಯುಬಿಡಿಟಿ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ನಡೆದ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟದ ಸಮಾರೋಪ ಸಮಾರಂಭ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿ ಅವರು, ಸರ್ಕಾರಿ ನೌಕರರಿಗೆ ಕೇರಳ ಮಾದರಿಯ ವೇತನ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು ನವೆಂಬರ್ ತಿಂಗಳಲ್ಲಿ ಹೋರಾಟ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ಹೇಳಿದರು.

ಬೇರೆ ಕಡೆಗಳಲ್ಲಿ ನಡೆದ ಕ್ರೀಡಾಕೂಟಗಳಿಗಿಂತ ದಾವಣಗೆಯಲ್ಲಿಯೇ ಅತ್ಯಂತ ಯಶಸ್ಸು ಕಂಡಿದೆ ಎಂದು ಸಂತಸ ವ್ಯಕ್ತಪಡಿಸಿದ ಅವರು, ಡಿಸೆಂಬರ್ ತಿಂಗಳಲ್ಲಿ ಜಿಲ್ಲಾಮಟ್ಟದ ಹಾಗೂ ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ರಾಜ್ಯಮಟ್ಟದ ಮತ್ತೊಂದು ಕ್ರೀಡಾಕೂಟ ಆಯೋಜಿಸುವ ಉದ್ದೇಶ ಹೊಂದಿರುವುದಾಗಿ ತಿಳಿಸಿದರು.

2022 ರಲ್ಲಿ ಹೊಸ ವೇತನ ಪಡೆಯುವ ನಿಟ್ಟಿನಲ್ಲಿ ಚಳವಳಿ ರೂಪಿಸಲಾಗಿದ್ದು, ಶಿಕ್ಷಕರ ಬೇಡಿಕೆಗಳನ್ನು ಮುಂದಿಟ್ಟುಕೊಂಡು ನವೆಂಬರ್ ತಿಂಗಳಲ್ಲಿ ಪ್ರತ್ಯೇಕ ಹೋರಾಟ ನಡೆಸಲಾಗುವುದು ಎಂದರು.

ಖಾಲಿ ಇರುವ ಎರಡು ಲಕ್ಷ ಹುದ್ದೆಗಳನ್ನು ಭರ್ತಿ ಮಾಡಬೇಕು. ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತರಬೇಕೆಂದು ಅವರು ಆಗ್ರಹಿಸಿದರು. (4ನೇ ಪುಟಕ್ಕೆ)

## ತರಳಬಾಳು ಶ್ರೀಗಳಿಂದ ಇಂದು ತುಪ್ಪದಹಳ್ಳಿ ಕೆರೆ ವೀಕ್ಷಣೆ

### ಜಗಳೂರು ತಾ. 57 ಕೆರೆಗಳಿಗೆ ಡಿಸೆಂಬರ್‌ಗೆ ನೀರು ಹರಿಕೆ

ಜಗಳೂರು, ಅ.24- ವಿಧಾನಸಭಾ ಕ್ಷೇತ್ರದ 57 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಲ್ಲಿ ಹಾಲೇಕಲ್ಲು ಕೆರೆಯು ಸೇರಿದ್ದು, ಡಿಸೆಂಬರ್ ತಿಂಗಳಲ್ಲಿ ನೀರು ಹರಿಸಲಾಗುವುದು ಎಂದು ಕ್ಷೇತ್ರದ ಶಾಸಕ ಎಸ್.ವಿ.ರಾಮಚಂದ್ರ ಹೇಳಿದರು.

ತಾಲ್ಲೂಕಿನ ಹಾಲೇಕಲ್ಲು ಗ್ರಾಮದಲ್ಲಿ ಭಾನುವಾರ ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರ ಪುತ್ಥಳಿಯ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಸಿರಿಗೆರೆ ಡಾ|| ಶಿವಮೂರ್ತಿಶಿವಾಚಾರ್ಯ ಮಹಾಸ್ವಾಮೀಜಿಗಳ ಪರಿಶ್ರಮದಿಂದ ಭರಮಸಾಗರ ಕೆರೆಗೆ ವ್ಯವಸ್ಥಿತವಾಗಿ ಗಂಗಾ ಮಾತೆ ಹರಿದು ಬರುತ್ತಿದೆ. ಅದೇ ರೀತಿ ವಿಧಾನಸಭಾ ಕ್ಷೇತ್ರದ 57 ಕೆರೆಗಳಿಗೆ ನೀರು ಹರಿದು ಬರಲಿದೆ. ಶ್ರೀಗಳು ಕೈ ಹಾಕಿದ ಕೆಲಸಗಳು ಯಶಸ್ವಿಯಾಗುತ್ತವೆ ಎಂಬುದಕ್ಕೆ ಈ ಯೋಜನೆಯೇ ಮುಖ್ಯ ಕಾರಣ. ಪೂಜ್ಯರು ಕಾಲಿಟ್ಟ ನಾಡು ಬಂಗಾರದ ಬೀಡು ಆಗಲಿದೆ ಎಂದರು.

ಇಂದು ಸೋಮವಾರ 10 ಗಂಟೆಗೆ ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಗಳು ದೀಟೂರಿನಿಂದ 57 ಕೆರೆಗಳಿಗೆ ನೀರು ತುಂಬಿಸುವ



ಯೋಜನೆಯ ಕಾಮಗಾರಿ ವೀಕ್ಷಣೆಗೆ ಚಟ್ನಹಳ್ಳಿ ಗುಡ್ಡಕ್ಕೆ ಆಗಮಿಸಿ ಕಾಮಗಾರಿ ವೀಕ್ಷಿಸಲಿದ್ದಾರೆ. ಅಣಜಿ ಕೆರೆ ವೀಕ್ಷಣೆ ಮಾಡಿದ ನಂತರ ತುಪ್ಪದಹಳ್ಳಿ ಕೆರೆಗೆ ಆಗಮಿಸಿ ವೀಕ್ಷಣೆ ಮಾಡಲಿದ್ದಾರೆ ಎಂದು ಶಾಸಕರು ಮಾಹಿತಿ ನೀಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ ಅವರ ನೇತೃತ್ವದಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿಗೆ ಶೀಘ್ರದಲ್ಲೇ ಶಂಕುಸ್ಥಾಪನೆ ನಡೆಸಲಾಗುವುದು. ಕ್ಷೇತ್ರದ ಅಭಿವೃದ್ಧಿಗೆ ಬದ್ಧನಾಗಿರುವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಮಾಜ ಸೇವಕ ಕಾಂಗ್ರೆಸ್ ಮುಖಂಡ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ, ಹೊಸಹಳ್ಳಿ ಚಂದ್ರಗಿರಿ ಮಠದ ಶ್ರೀ ಮುರುಳೀಧರ ಮಹಾಸ್ವಾಮೀಜಿ ಅವರುಗಳು ಮಾತನಾಡಿದರು. ಗ್ರಾಮದ ಮುಖಂಡರುಗಳು, ಶಾಸಕ (3ನೇ ಪುಟಕ್ಕೆ)

# ಮಹನೀಯರ ತತ್ವ, ಆದರ್ಶಗಳು ಸರ್ವ ಜನಾಂಗಕ್ಕೂ ದಾರಿದೀಪ

## ಹರಪನಹಳ್ಳಿ : ಕಾಂಗ್ರೆಸ್‌ನಿಂದ ನಡೆದ ರಾಣಿ ಚೆನ್ನಮ್ಮ ಜಯಂತ್ಯೋತ್ಸವದಲ್ಲಿ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸದಸ್ಯ ಶಶಿಧರ್ ಪೂಜಾರ್



ಹರಪನಹಳ್ಳಿ, ಅ.24 - ಮಹನೀಯರ ಜಯಂತಿಗಳು ಒಂದು ಜಾತಿಗೆ ಸೀಮಿತವಲ್ಲ ಅವರ ತತ್ವ ಆದರ್ಶಗಳು ಸರ್ವ ಜನಾಂಗಕ್ಕೂ ದಾರಿದೀಪ ಎಂದು ಜಿಲ್ಲಾ ಟಾಸ್ಕ್ ಪೋರ್ಸ್ ಸಮಿತಿ ಸದಸ್ಯ ಶಶಿಧರ್ ಪೂಜಾರ್ ಹೇಳಿದರು.

ಪಟ್ಟಣದ ಬಾಣಗೇರೆ ಬೈಪಾಸ್ ಪಕ್ಕದಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ಏರ್ಪಡಿಸಿದ್ದ ಕಿತ್ತೂರು ಚೆನ್ನಮ್ಮ ಜಯಂತಿಯಲ್ಲಿ ಪಾಲ್ಗೊಂಡು ಚೆನ್ನಮ್ಮನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಬಳಿಕ ಮಾತನಾಡಿದ ಅವರು, ವೀರ ರಾಣಿ ಕಿತ್ತೂರು ರಾಣಿ ಚೆನ್ನಮ್ಮರ ಜಯಂತಿ ಕೇವಲ ಒಂದು ಜಾತಿಗೆ ಮೀಸಲಲ್ಲ. ಅವರು ಸರ್ವ ಜನಾಂಗಕ್ಕೂ ಮೀಸಲು. ಅವರ ಆದರ್ಶ ಗುಣಗಳು ಎಲ್ಲರಿಗೂ ದಾರಿದೀಪವಾಗಿವೆ. ಇಂತಹ ವೀರ ವನಿತೆಯ ಆದರ್ಶಗಳನ್ನು ಇಂದಿನ ಯುವತಿಯರು ಅಳವಡಿಸಿಕೊಳ್ಳಬೇಕು ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಮುಖಂಡ ಎಂ.ಬಿ.ಯಶವಂತ ಗೌಡ, ವಕೀಲ ಎಂ.ಅಜ್ಜಣ್ಣ, ಟಿಎಪಿಸಿಎಂಎಸ್ ನಿರ್ದೇಶಕ ಹೆಚ್.ತಿಮ್ಮನಾಯ್ಕ್, ಗಿಡ್ಡಳ್ಳಿ ನಾಗರಾಜ್, ಎಲ್.ಬಿ.ಹಾಲೇಶ್ ನಾಯ್ಕ್, ಪುರಸಭೆ ಸದಸ್ಯ ಜಾಕೀರ್ ಹುಸೇನ್ ಸರ್ಖಾವಸ್, ತಾಲ್ಲೂಕು ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಎನ್. ಮಜೀದ್, ಯುವ ಕಾಂಗ್ರೆಸ್ ಉಪಾಧ್ಯಕ್ಷ ಟಿ.ಪ್ರವೀಣ್ ಕುಮಾರ್, ಎನ್‌ಎಸ್‌ಯುಐ ತಾಲ್ಲೂಕು ಅಧ್ಯಕ್ಷ ಶ್ರೀಕಾಂತ್ ಯಾದವ್, ಲಾಟಿ ಶಂಷುದ್ದೀನ್, ರಿಯಾಜ್ ಅಹ್ಮದ್, ನಯಾಜ್ ಮತ್ತಿತರರು ಉಪಸ್ಥಿತರಿದ್ದರು.

# ದೇವೇಂದ್ರಪ್ಪ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮ ಮುಂದೂಡಿಕೆ



ಜಗಳೂರು

ಜಗಳೂರು, ಅ.24 - ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ನಾಳೆ ದಿನಾಂಕ 25 ರಂದು ನಡೆಯಬೇಕಿದ್ದ ಜೆಡಿಎಸ್ ಮುಖಂಡ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ ಮತ್ತು ಬೆಂಬಲಿಗರ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಂಷೀರ್ ಅಹಮದ್ ತಿಳಿಸಿದ್ದಾರೆ.

ಪಟ್ಟಣದ ಪತ್ರಿಕಾ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ, ಪರಾಜಿತಗೊಂಡಿದ್ದ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ, ಜೆಡಿಎಸ್ ತಾಲ್ಲೂಕಾಧ್ಯಕ್ಷ ಗುರುಸಿದ್ದಪ್ಪ ಸೇರಿದಂತೆ ನೂರಾರು ಜೆಡಿಎಸ್ ಕಾರ್ಯಕರ್ತರು ಕಾಂಗ್ರೆಸ್ ಸೇರಲು ಸಮಾರಂಭ ಯೋಜಿಸಲಾಗಿತ್ತು. ಆದರೆ, ಕೆಪಿಸಿಸಿ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಸೂಚನೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸೇರ್ಪಡೆಯ ಅದ್ಧೂರಿ ಕಾರ್ಯಕ್ರಮವನ್ನು ಮುಂದೂಡಲಾಗಿದೆ ಎಂದರು.

ಮುಖಂಡ ಚಿಕ್ಕಮ್ಮನಟಹಟ್ಟಿ ದೇವೇಂದ್ರಪ್ಪ ಮಾತನಾಡಿ, ಡಿ.ಕೆ.ಶಿವಕುಮಾರ್ ಅವರೇ ಖುದ್ದಾಗಿ ಕರೆ ಮಾಡಿ, ತಮ್ಮ ಮಾವನ ಅನಾರೋಗ್ಯದ ಬಗ್ಗೆ ಪ್ರಸ್ತಾಪಿಸಿ, ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮವನ್ನು ಸದ್ಯಕ್ಕೆ ಮುಂದೂಡಿ, ಶೀಘ್ರವೇ ನಿಮಗೆ ಸಮಯ ನೀಡಲಾಗುವುದು ಎಂದು ತಿಳಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಜೆಡಿಎಸ್ ತಾಲ್ಲೂಕಾಧ್ಯಕ್ಷ ಗುರುಸಿದ್ದಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಎಸ್ ರಾಜು, ಸಿ.ತಿಪ್ಪೇಸ್ವಾಮಿ, ಗ್ರಾ.ಪಂ.ಉಪಾಧ್ಯಕ್ಷ ಅನುಪಮ್, ಮುಖಂಡರಾದ ಪ್ರಕಾಶ್‌ರೆಡ್ಡಿ, ಕೆಚ್ಚೇನಹಳ್ಳಿ ಶಿವಣ್ಣ, ಹರೀಶ್ ಸೇರಿದಂತೆ ಮತ್ತಿತರರಿದ್ದರು.

# ಒಳ ಮೀಸಲಾತಿಗೆ ಆಗ್ರಹಿಸಿ ನಾಳೆ ತಮಟೆ ಚಳವಳಿ



ಹರಿಹರ

ಹರಿಹರ, ಅ.24- ನ್ಯಾ. ಸದಾಶಿವ ಆಯೋಗದ ವರದಿಯಂತೆ ಒಳ ಮೀಸಲಾತಿ ಜಾರಿ, ಮನೆ ಹಕ್ಕುಪತ್ರ ವಿತರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಾಡಿದ್ದು ದಿನಾಂಕ 26ರ ಮಂಗಳವಾರ ನಗರದಲ್ಲಿ ಬೃಹತ್ ತಮಟೆ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ದಸಂಸ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ತಿಳಿಸಿದ್ದಾರೆ.

ಹೊರವಲಯದ ಪ್ರೊ. ಬಿ.ಕೃಷ್ಣಪ್ಪ ಸಾಂಸ್ಕೃತಿಕ ಭವನದಲ್ಲಿ ನಿನ್ನೆ ನಡೆದ ತಾಲ್ಲೂಕು ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಮಂಗಳವಾರ ಬೆಳಿಗ್ಗೆ 10ಕ್ಕೆ ನಗರದ ಶಿವಮೊಗ್ಗ ರಸ್ತೆ ಶ್ರೀಕಾಂತ್ ಟಾಕೀಸ್ ಮುಂಭಾಗದಿಂದ ಮೆರವಣಿಗೆ ನಡೆಸಲಾಗುವುದು. ತಾಲ್ಲೂಕು ಕಚೇರಿಗೆ ತಲುಪಿ ತಹಶೀಲ್ದಾರರಿಗೆ ಮನವಿ ನೀಡಲಾಗುವುದು. ದಸಂಸ ರಾಜ್ಯ ಸಂಚಾಲಕ ಎಂ.ಗುರುಮೂರ್ತಿ, ಚಲನಚಿತ್ರ ನಿರ್ದೇಶಕ ಅಭಿಗೌಡ್ರು, ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ, ಜಿಲ್ಲಾ ಮಹಿಳಾ ಸಂಚಾಲಕಿ ವಿಜಯಲಕ್ಷ್ಮಿ ಇತರರು ಭಾಗವಹಿಸುವರು.

ಸಭೆಯಲ್ಲಿ ದಲಿತ ಮುಖಂಡರಾದ ಕುಂಬಳೂರು ಬಸವರಾಜಪ್ಪ, ಹರಳಹಳ್ಳಿ ಗ್ರಾಪಂ ಸದಸ್ಯರಾದ ಎಚ್.ಎಂ.ಹನುಮಂತಪ್ಪ, ಗುಳದಹಳ್ಳಿ ಮಂಜಪ್ಪ, ಹೊಸಪಾಳ್ಯ ಪಿ. ಪರಶುರಾಮ್, ಕೆ.ಎನ್.ಹಳ್ಳಿ ಗ್ರಾಪಂ ಮಾಜಿ ಉಪಾಧ್ಯಕ್ಷ ರಮೇಶ್ ಬಿ.ಡಿ., ನಾಗೇನಹಳ್ಳಿ ಎಚ್.ಬಿ. ಬಸವರಾಜ್, ಕುಣೆಬೆಳೆಕೆರೆ ಬಿ.ಎಚ್. ಅಣ್ಣಪ್ಪ, ಬೆಳ್ಳೂಡಿ ಎಂ. ರಂಗನಾಥ್, ಮರಿದೇವಪ್ಪ ಕುಂಬಳೂರು, ಮಂಜುನಾಥ್ ಎಂ. ಹೊಸಪಾಳ್ಯ, ಗಿರೀಶ್ ಎಸ್. ಎಸ್., ಶಿವಕುಮಾರ್ ಟಿ.ಎಚ್. ಲೋಕಿಕೆರೆ, ಪರಶುರಾಮಪ್ಪ ಎಸ್. ಬಾತಿ, ಸಂತೋಷ್ ಕುಮಾರ್ ಎಚ್.ಕೆ. ನಂದಿಗಾವಿ, ಬೆಳ್ಳೂಡಿಯ ಪ್ರವೀಣ್, ನಾಗರಾಜ್ ಡಿ.ಎಚ್. ಸಾರಥಿ ಇತರರಿದ್ದರು.

# ಕಬ್ಬೂರಿನಲ್ಲಿ ಇಂದು

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಮುರಾರ್ಜಿ ಕಲಾ ಬಳಗದ ವತಿಯಿಂದ ಇಂದು ಸಂಜೆ 6.30 ಕ್ಕೆ 'ಸಾಂಸ್ಕೃತಿಕ ಸಂಭ್ರಮ'. ಉದ್ಘಾಟನೆ: ಮಹಾಂತೇಶ್ ಬೀಳಗಿ. ಅಧ್ಯಕ್ಷತೆ : ಅತ್ತಿಗೆರೆ ಗ್ರಾಮ ಪಂಚಾಯತಿ ಅಧ್ಯಕ್ಷೆ ಯಶೋಧಮ್ಮ ಚಂದ್ರಪ್ಪ. ಅತಿಥಿಗಳು : ಬಿ. ಪಾಲಾಕ್ಷಿ, ಮಲ್ಲಿಕಾರ್ಜುನ್ ಕಬ್ಬೂರು, ರವಿಚಂದ್ರ, ಪಿ.ಎಂ. ಶಿವಕುಮಾರ್, ಆರ್. ಕಲ್ಲೇಶ್, ಎನ್.ಎಂ. ಕೋಟಿ, ವಿಜಿಯಮ್ಮ, ಪಾರ್ವತಮ್ಮ ಇತರರು.

# ನಾವು ವಾಲ್ಮೀಕಿ ನಾಯಕರಾಗಬೇಕು



(1ನೇ ಪುಟದಿಂದ) ಸ್ವಾಮೀಜಿ ಮಾತೃ ಹೃದಯಿಗಳಾಗಿದ್ದು, ವಾಲ್ಮೀಕಿ ನಾಯಕ ಸಮಾಜವನ್ನು ಸಂಘಟಿಸುವ ಮೂಲಕ ಹಗಲಿರುಳು ಎನ್ನದೇ ಶ್ರಮಿಸುತ್ತಿದ್ದು, ಶ್ರೀಗಳ ಜೊತೆಗೆ ಸಮಾಜದವರು ಕೈ ಜೋಡಿಸಬೇಕು ಎಂದು ಕರೆ ನೀಡಿದರು.

ಉಪನ್ಯಾಸಕ ರಮೇಶ್‌ಕುಮಾರ್ ವಾಲ್ಮೀಕಿ ಮಾತನಾಡಿ, ಮಹರ್ಷಿ ವಾಲ್ಮೀಕಿ, ಮದಕರಿ ನಾಯಕ ಸೇರಿದಂತೆ ರಾಜ್ಯದ 77 ಪಾಳೇಗಾರರು ಸಮಾಜ ಕಟ್ಟುವಲ್ಲಿ ಶ್ರಮ ಪಟ್ಟಿದ್ದಾರೆ. ಪ್ರತಿ ರಾಜರ ಹಿಂದೆ ವಾಲ್ಮೀಕಿ ನಾಯಕರ ಬೇಡರ ಶ್ರಮವಿದೆ. ಸಮಾಜದ ಮೀಸಲಾತಿಯಿಂದ ಚುನಾಯಿತರಾದ ವಾಲ್ಮೀಕಿ ನಾಯಕ ಸಮಾಜದ ಶಾಸಕರು, ಸಂಸದರು ಸಮುದಾಯಕ್ಕೆ ಸಿಗಬೇಕಾದ ಮೀಸಲಾತಿಗಾಗಿ ಹೋರಾಟಕ್ಕೆ ಇಳಿಯಬೇಕು. ಹಾಗಾದರೆ ಮೀಸಲಾತಿ ಸಿಕ್ಕೇ ಸಿಗುತ್ತದೆ ಎಂದರು.

ವಿಜಯನಗರ ಜಿಲ್ಲೆಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಸಂಗಪ್ಪನವರ್ ಮಾತನಾಡಿ, ವಾಲ್ಮೀಕಿ ಸರ್ಕಾರಿ ನೌಕರರ ತಾಲ್ಲೂಕು ಸಂಘದವರು ಆರೋಗ್ಯ ಪೂರ್ಣ ಸಮಾಜ ಕಟ್ಟುವ ಮೂಲಕ ಇತರೆ ಸಮಾಜಗಳ ಜೊತೆಗೆ ಉತ್ತಮ ಬಾಂಧವ್ಯ ಇಟ್ಟುಕೊಳ್ಳಬೇಕು ಎಂದರು.

ವಾಲ್ಮೀಕಿ ಸರ್ಕಾರಿ ನೌಕರರ ತಾಲ್ಲೂಕು ಸಂಘದ ಅಧ್ಯಕ್ಷ ಬಿ.ಪಿ. ಮಂಜುನಾಥ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯನಿರ್ವಾಹಕ ಅಧಿಕಾರಿ ಹುಲ್ಲುಮನಿ ತಿಮ್ಮಣ್ಣ, ಹರಪನಹಳ್ಳಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಪಟ್ಟಣ ಪಂಚಾಯಿತಿ ಸ್ಥಾಯಿ ಸಮಿತಿ ಅಧ್ಯಕ್ಷ ಟಿ.ರಾಮಣ್ಣ, ಪಟ್ಟಣ ಪಂಚಾಯಿತಿ ಸದಸ್ಯರಾದ ಹೆಚ್. ಅಂಜಿನಮ್ಮ, ವಿರೂಪಾಕ್ಷಪ್ಪ, ವಾಲ್ಮೀಕಿ ಸರ್ಕಾರಿ ನೌಕರರ ಸಂಘದ ಹರಪನಹಳ್ಳಿ ತಾಲ್ಲೂಕು ಘಟಕದ ಅಧ್ಯಕ್ಷ ಜಿ. ಕಾಂತರಾಜ್, ಕಾರ್ಯದರ್ಶಿ ಜಿ.ನಾಗಪ್ಪ, ಕೊಟ್ಟೂರು ವಾಲ್ಮೀಕಿ ಸರ್ಕಾರಿ ನೌಕರರ ತಾಲ್ಲೂಕು ಸಂಘದ ಗೌರವ ಅಧ್ಯಕ್ಷ ಬೋರಯ್ಯ, ಪ್ರಧಾನ ಕಾರ್ಯದರ್ಶಿ ಹೆಚ್. ಕೊಟ್ರೇಶ್, ಉಪಾಧ್ಯಕ್ಷರುಗಳಾದ ಚಾಮರಾಜ್, ಬಿ.ಪಿ. ತಿಪ್ಪೇಸ್ವಾಮಿ, ಜಿ.ಗುರುಬಸವರಾಜ್, ಎ. ಮಲ್ಲಿಕಾರ್ಜುನ್, ಎಂ. ಕೇಶವಮೂರ್ತಿ, ಖಜಾಂಚಿ ಎಂ. ಕರಿಬಸಪ್ಪ, ಕಾರ್ಯದರ್ಶಿಗಳಾದ ಹನುಮಂತಪ್ಪ ಸೊಪ್ಪಿನ, ಯು. ಹೇಮಣ್ಣ, ಹೆಚ್. ರೇವಣ್ಣ, ಸಹಕಾರ್ಯದರ್ಶಿಗಳಾದ ಎಸ್. ನಿಂಗಪ್ಪ, ವಿ. ಕೆಂಚಮ್ಮ, ಸಂಘಟನಾ ಕಾರ್ಯದರ್ಶಿಗಳಾದ ಕೆ.ತಿಪ್ಪಣ್ಣ, ಬಿ.ರವೀಂದ್ರ, ಟಿ.ರಾಜೇಂದ್ರ ಪ್ರಸಾದ್ ಸೇರಿದಂತೆ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.


ವಿದ್ಯಾನಗರ ದಾಟಿ ಬನಶಂಕರಿ ಲೇಔಟ್‌ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ
30x50 East, 40 ಅಡಿ ರೋಡಿಗಿದೆ
30x50 West, 30x40 East,
30x40 West, 60x50 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಬೇಕಾಗಿದ್ದಾರೆ
ಹೋಟೆಲ್ (ಸಸ್ಯಹಾರಿ)
ಕೆಲಸಕ್ಕೆ ಭಟ್ಟರು ಬೇಕಾಗಿದ್ದಾರೆ.
ಶಾಮನೂರು ರಸ್ತೆ, ದಾವಣಗೆರೆ.
97434 82356

ಕರ್ನಾಟಕ ಗೃಹಮಂಡಳಿಯಲ್ಲಿ ಮನೆ, ಸೈಟ್‌ಗಳು ಮಾರಾಟಕ್ಕಿವೆ
30x40 North, ಮನೆ 35 ಲಕ್ಷಕ್ಕೆ,
40x60 East, 50x80 East,
30x50 South, 30x40 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಬೇಕಾಗಿದ್ದಾರೆ
ಎಸ್ ಎಸ್ ಬಡಾವಣೆ ಕ್ಲಾಕ್ ಟವರ್ ಸರ್ಕಲ್ ಹತ್ತಿರ ಪ್ರತಿದಿನ ಬೆಳಗ್ಗೆ ಕಾಂಪೌಂಡ್ ಕಸಗುಡಿಸಿ, ಕಾರ್ ತೊಳೆಯಲು ಹಾಗೂ ಇತರೆ ಸಣ್ಣ ಪುಟ್ಟ ಕೆಲಸ ಮಾಡಿಕೊಡುವ ಹುಡುಗ ಬೇಕಾಗಿದ್ದಾನೆ. ಸಂಪರ್ಕಿಸಿ
80732 13305

House To-Let
2BHK 'Santrupthi'
# 1640/66-67, Saraswati
Badavane, Davanagere.
Veg only
94484 46708

ಶಿಕ್ಷಕಿಯರು ಬೇಕಾಗಿದ್ದಾರೆ
BA. D.Ed, B.Sc, D.Ed, B.Com, NTC
ತರಬೇತಿ ಹೊಂದಿದ ಶಿಕ್ಷಕಿಯರು ಬೇಕಾಗಿದ್ದಾರೆ.
S.J.M. PUBLIC SCHOOL, ನಿಟುವಳ್ಳಿ
ಆಂಜನೇಯ ಬಡಾವಣೆ, 5ನೇ ಕ್ರಾಸ್, ದಾವಣಗೆರೆ.
82176 07934, 63609 63763
98806 86866

ಬೇಕಾಗಿದ್ದಾರೆ
ದೇವರಾಜ ಅರಸ್ ಬಡಾವಣೆ 'ಸಿ' ಬ್ಲಾಕ್‌ನಲ್ಲಿರುವ ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ BSc B.Ed (PCM/CBZ), BSc ಹಾಗೂ M.Sc (Maths) ತರಬೇತಿ ಹೊಂದಿದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿರಿ
99640 17729

ಬೇಕಾಗಿದ್ದಾರೆ
ಔಷಧ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ: ಅಮರಾವತಿ ಹಾಲಪ್ಪ
98454 84076

ಕೆಲಸಕ್ಕೆ ಬೇಕಾಗಿದ್ದಾರೆ
ಡ್ರೈವರ್, ಸೆಕ್ಯೂರಿಟಿ, ತೋಟಗಾರ, ಆಯಾಗಳು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
96635 31112
ಬೆಂಗಳೂರು.

Required
Chemist-1 and Accountant-1
Contact : Aradhya Chemical and Fertilizers (male only)
#115, 1 old P.B. Road, Back side Nandi petrol Bunk, Davangere.
08192 231168
email: acfdvg@gmail.com

ನವೋದಯ ಕೋಚಿಂಗ್
5ನೇ, 8ನೇ ತರಗತಿ ವಿದ್ಯಾರ್ಥಿಗಳಿಗೆ ನವೋದಯ ಕೋಚಿಂಗ್
ದಿನಾಂಕ 30-10-21ರಿಂದ ಪ್ರಾರಂಭ
ಸಿಂಚನ ಅಕಾಡೆಮಿ
SBI ATM ಎದುರುಗಡೆ,
ರಾಮ್ ಅಂಡ್ ಕೋ ಸರ್ಕಲ್, ದಾವಣಗೆರೆ
ಸೌಮ್ಯ 85532 78258

ಗ್ಲಾಸ್ ಶೆಲ್ಫ್‌ಗಳು ಮಾರಾಟಕ್ಕಿವೆ
ಬಟ್ಟೆ ಅಂಗಡಿ- ಜ್ಯೂಯಲರಿ ಶಾಪ್, ಪೇಸ್ಟ್ರೀ, ಬೇಕರಿ ಕಾಸ್ಮೆಟಿಕ್ ಶಾಪ್, ಮೆಡಿಕಲ್ ಶಾಪ್- ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳಿಗೆ ಅನುಕೂಲಕರವಾದ ಗ್ಲಾಸ್ ಶೇಲ್ಪ್, ಗ್ಲಾಸ್ ಸೇಲ್ಸ್ ಕೌಂಟರ್-ಗ್ಲಾಸ್ ಡೋರ್, ದೊಡ್ಡ ಅಳತೆಯ ಶೋಕೇಸ್ ಗ್ಲಾಸ್‌ಗಳು ಕನ್ನಡಿ ಮತ್ತು ಕ್ಯಾಶ್ ಕೌಂಟರ್ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ.
94480 46613

ಮಿಷನ್ ಖರೀದಿ, ಮಾರಾಟ
ಅಗರಬತ್ತಿ ಮಿಷನ್, ಪ್ರಿಂಟಿಂಗ್ ಮಿಷನ್, ಪ್ಯಾಕಿಂಗ್ ಮಿಷನ್, ಸೆಕೆಂಡ್ ಹ್ಯಾಂಡ್ ಹಳೆಯ ಮಿಷನ್ ಬೇಕಾಗಿವೆ.
89517 16682

SHOPS FOR RENT
(With wash Room facility) N.R Road Davangere.
94483 69523

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಸೇಲ್
U.S. POLO ASSN. Levi's FLYING MACHINE DMAX spykar YOUNG & RESTLESS
Raymond JACK&JONES OXEMBERG ARROW
INDIAN TERRAIN PARK AVENUE VAN HEUSEN UNITED COLORS OF BENETTON
parx Wrangler Superdry Calvin Klein
Lee TOMMY HILFIGER PUMA Bata ROYAL ENFIELD
WOODLAND sparx NIKE BUGATTI
FILA adidas Reebok Roadster WROGN
ಈ ಎಲ್ಲಾ ಪ್ರೀಮಿಯರ್ ಬ್ರಾಂಡ್‌ಗಳ ಶರ್ಟ್ಸ್, ಪ್ಯಾಂಟ್ಸ್, ಜೀನ್ಸ್‌ಗಳು, ಶೂಗಳು ಮತ್ತು ಒಳಉಡುಪುಗಳು ರಿಯಾಯ್ತಿ ದರದಲ್ಲಿ (Upto 70%) ದೊರೆಯುತ್ತವೆ.
ಈ ಅವಕಾಶ ಸ್ಟಾಕ್ ಇರುವವರೆಗೆ ಮಾತ್ರ
70% ರ ವರೆಗೆ
ಉದಯ ಸೂಪರ್ ಬಜಾರ್ ಹದಡಿ ರಸ್ತೆ, ದಾವಣಗೆರೆ.

ಮಳಿಗೆ ಸಹಿತ ಗೋಡೌನ್ ಬಾಡಿಗೆಗೆ
ಚೌಕಿ ಪೇಟೆ ಬಕ್ಕೇಶ್ವರ ದೇವಸ್ಥಾನದ ಹಿಂಭಾಗ ಮಳಿಗೆ ಸಹಿತ ಗೋಡೌನ್ ಬಾಡಿಗೆಗೆ ಇದೆ.
98800 35266
98443 55553

WANTED
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ/ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ-1

ಬೇಕಾಗಿದ್ದಾರೆ
ಪೈಪ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
98443 26605

HOUSE FOR RENT
#5628/D-23, 2BHK 2nd floor, 4th Main, 6th Cross (left)
Near Indoor Neharu Stadium
S.S. Badavane 'B' Block
House Name SHIVARATNA
(Brokers Not Allowed)
94489 29509

Wanted Lady Teachers
BA B.Ed - 05
BSc B.Ed - 02, D.Ed - 02
Contact immediately to secretary vinayaka convent, behind kalikadevi temple dvg.
Cell: 95356 10817
88920 07561

HOUSE TO-LET
2 BHK House at 1st Floor (Veg Only).
B.T. GALLI, Sri Chowdambika devi temple Road, Davangere-577001
97392 65666

ಶಾಲೆ ಬಿಟ್ಟಿದ್ದೀರಾ?
7,8,9,10 ಪಾಸ್/ಫೇಲ್ SSLC ನೇರ ಪರೀಕ್ಷೆ
ಕೆಲವೇ ಸೀಟುಗಳು ಮಾತ್ರ
II PUC ನೇರ ಪರೀಕ್ಷೆ, Science,Arts, Commerce
NTC, B.A., B.Com., B.Sc., MA., M.Com., MSc, MBA, MCA, BBM, BBA, BBW ದೂರ ಶಿಕ್ಷಣದಲ್ಲಿ.
ಮಹ್ಮದನ್ NTC ಕಾಲೇಜ್,
ಕೆ.ಟಿ.ಜೆ. ನಗರ, ದಾವಣಗೆರೆ.
93411 19195, 99800 32237

ಬೇಕಾಗಿದ್ದಾರೆ
ಬಿನ್ನಿ ಕಂಪನಿ ರೋಡಿನಲ್ಲಿರುವ ಮನೆಗೆ ಮಹಿಳಾ ಮನೆಗೆಲಸದವರು ಬೇಕಾಗಿದ್ದಾರೆ. ಸಂಪರ್ಕಿಸಿ
90351 11030

ವಾಟರ್ ಪ್ರೂಫಿಂಗ್
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟೆರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

WANTED TEACHRS
Nursery Teachers - 2
BA/B.Sc/B.Ed/D.Ed - 4
To Teach for 1st to 8th std
Contact with originals
99801 48289
98807 43838

JOB OPENINGS
H.R. Junior & Senior, Service Manager (car), Sales Team Lead, CRM, Managers, IT Service/ CCTV Technician
98444 92888

ಕ್ಲಿಯರೆನ್ಸ್ ಸೇಲ್
Upto 30% ಡಿಸ್ಕೌಂಟ್
ಶೂಟಿಂಗ್ಸ್, ಶರ್ಟಿಂಗ್ಸ್
ನಾಕೋಡಾ'ಸ್ ಮೆನ್ಸ್ ಅವೆನ್ಯೂ
# 9/1-ಬಿ, ಚೌಕಿಪೇಟೆ, ದಾವಣಗೆರೆ.

ಬೇಕಾಗಿದ್ದಾರೆ
ಆಫೀಸ್ ಬಾಯ್ ಕೆಲಸಕ್ಕೆ SSLC Pass or Fail ಆದವರು ಬೇಕಾಗಿದ್ದಾರೆ. 18 ರಿಂದ 25 ವರ್ಷದವರಿಗೆ ಆದ್ಯತೆ. ಸಂಪರ್ಕಿಸಿ :
97413-97006, 94487-83332
(ಪುರುಷರು ಮಾತ್ರ)

SITE FOR SALE
40x50 Corner site North West in M.C.C Extended `B' Block, Near to school, Davangere.
Mob : 89044-44599

ಅಕೌಂಟೆಂಟ್ ಬೇಕಾಗಿದ್ದಾರೆ
2-3 ವರ್ಷ ಅನುಭವಿರುವವರಿಗೆ ಆದ್ಯತೆ. ನೋಬಲ್ ಟಾರ್ಪಾಲಿನ್‌ನಲ್ಲಿನ ಕಂಪನಿ, ಗಾಂಧೀ ಸರ್ಕಲ್ ಹತ್ತಿರ, ಪಿ.ಬಿ.ರೋಡ್, ದಾವಣಗೆರೆ.
90600 00643
98442 07697

ನೇರ ಪರೀಕ್ಷೆಗಳು
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC
Degree, Pharmacy & BHMS
(Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

ಮಾಂತ್ರಿಕ ಮೋಡಿ ಬೆಟ್ಟಪ್ಪ
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

ಪ್ರವೇಶ ಪ್ರಕಟಣೆ
ಕರೆಸ್ಪಾಂಡೆನ್ಸ್/ ರೆಗ್ಯುಲರ್
SSLC, PUC, BA, B.Com, B.Sc, MA, M.Com, MSc, MBA, All PG & Diploma Courses
S.S. Global Institute for Higher Education, Davanagere.
72593 59861, 99863 45266


ಬಾಡಿಗೆಗೆ ಪಿ.ಜಿ. ಬೇಕಾಗಿದೆ
ದಾವಣಗೆರೆ ನಗರದ ಆಂಜನೇಯ ಬಡಾವಣೆ ಸುತ್ತ-ಮುತ್ತ ಪಿ.ಜಿ. ನಡೆಸಲು ಯೋಗ್ಯವಾಗಿರುವ ರೂಂಗಳು ಅಥವಾ ರನ್ನಿಂಗ್ ಸ್ಥಿತಿಯಲ್ಲಿ ಪಿ.ಜಿ. ಇದ್ದರೂ OK. ಬಾಡಿಗೆಗೆ ಕೊಡುವವರು ಸಂಪರ್ಕಿಸಿ
90601 72745

ನೇರ ಪರೀಕ್ಷೆಗಳು
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಕೊನೆಯ ದಿ:23.10.2021
ಮಾನಸ ಎಜುಕೇಷನ್ ಟ್ರಸ್ಟ್(ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

WANTED DOCTORS
MBBS/ M.D /BAMS
Excelents Runnig Clinic (Ganesh)
Bettur Road, Davanagere
98453 43082

ಕ್ರಯ ಪತ್ರ ಕಳೆದಿವೆ
(1) ಕ್ರಯ ಪತ್ರದ ರಿ. ನಂ. 5185/2007-08 ಸಿಡಿ ನಂ ಡಿವಿಜಿ 78, (2) ಕ್ರಯ ಪತ್ರದ ರಿ. ನಂ-05374/2007-08 ಸಿಡಿ ನಂ ಡಿವಿಜಿ 78, (3) ಕ್ರಯ ಪತ್ರದ ರಿ.ನಂ 7750/2007-08 ಸಿಡಿ ನಂ. ಡಿವಿಜಿ 82 (4) ಕ್ರಯದ ಕರಾರು ಪತ್ರದ ರಿ.ನಂ 13719/2012-13, ಸಿಡಿ ನಂ. ಡಿವಿಜಿ 289 ನಂಬರ್ ಗಳುಳ್ಳ ಈ ನಾಲ್ಕು ಕ್ರಯಪತ್ರಗಳು ದಿನಾಂಕ 16.10.2021 ರಂದು ಬೆಳಿಗ್ಗೆ 11.30ರ ಸಮಯದಲ್ಲಿ ದಾವಣಗೆರೆ ಸಿಟಿ ಕಾಯಿ ಪೇಟೆಯಲ್ಲಿ ಹೋಗುವಾಗ ಸದರಿ ದಾಖಲೆಗಳು ಆಕಸ್ಮಿಕವಾಗಿ ಕಳೆದು ಹೋಗಿರುತ್ತವೆ. ಎಲ್ಲಾ ಕಡೆ ಹುಡುಕಿದರೂ ಸಿಕ್ಕಿರುವುದಿಲ್ಲ. ಯಾರಿಗಾದರೂ ಸಿಕ್ಕಲ್ಲಿ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಲು ಕೋರಿದೆ.
98863 99339

WANTED
Experience Sales Staff
SHAH OPTICALS
Opp:- Drushti Eye Hospital near Vishveshwaraiah Park, P.J Extension, Davangere.



॥ ಶ್ರೀ ಬಸವೇಶ್ವರ ಪ್ರಸನ್ನ॥ ॥ ಶ್ರೀ ಕೊಳದ ಮಲ್ಲೇಶ್ವರ ಪ್ರಸನ್ನ ॥


## ಕೈಲಾಸ ಶಿವಗಣಾರಾಧನೆ ಆಹ್ವಾನ

ಹರಿಹರ ತಾಲ್ಲೂಕು ಜಿಗಳಿ ಗ್ರಾಮದ ವಾಸಿ
**ಶ್ರೀ ಮಲ್ಲನಗೌಡ್ರು ಶಿವನಗೌಡ್ರ ಬಸವನಗೌಡ್ರು**
ಮಾಜಿ ಅಧ್ಯಕ್ಷರು, ವಿಎಸ್‌ಎಸ್‌ಎನ್, ಜಿಗಳಿ
ಇವರು ಮಾಡುವ ವಿಜ್ಞಾಪನೆಗಳು.



ದಿನಾಂಕ 22.10.2021ರ ಶುಕ್ರವಾರ ಸಂಜೆ 5.30ಕ್ಕೆ ನನ್ನ ಧರ್ಮಪತ್ನಿಯಾದ
**ಶರಣೆ ಮಲ್ಲನಗೌಡ್ರ ಕಸ್ತೂರಮ್ಮನವರು**
ಇವರು ಶಿವೈಕ್ಯರಾದ ಪ್ರಯುಕ್ತ ದಿನಾಂಕ 25.10.2021ನೇ ಸೋಮವಾರ ರಾತ್ರಿ 10.30ಕ್ಕೆ
**ಶಿವಪುರಾಣ ಮತ್ತು ಶಿವಭಜನೆ**
ಏರ್ಪಡಿಸಲಾಗಿದೆ ಹಾಗೂ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 26.10.2021ನೇ ಮಂಗಳವಾರ ಬೆಳಗ್ಗೆ 11 ಗಂಟೆಗೆ ಹರಿಹರ ತಾಲ್ಲೂಕು ಜಿಗಳಿ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ಹಮ್ಮಿಕೊಳ್ಳಲಾಗಿದೆ, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

- ಶ್ರೀ ಮಲ್ಲನಗೌಡ್ರ ಶಿವನಗೌಡ್ರ, ಈರಮ್ಮ ಮತ್ತು ಮಕ್ಕಳು ಸದಸ್ಯರು, ಎಪಿಎಂಸಿ, ಹರಿಹರ
- ಶ್ರೀಮತಿ ಸುಮ ಶ್ರೀ ಜಿ.ಎಂ. ವೀರನಗೌಡ ಮತ್ತು ಮಕ್ಕಳು ಅಧ್ಯಕ್ಷರು, ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಜಿಗಳಿ
- ಶ್ರೀಮತಿ ಮಲ್ಲಮ್ಮ ಶ್ರೀ ಡಿ. ರಾಮನಗೌಡ
- ಮಲ್ಲನಗೌಡ್ರ ವಂಶಸ್ಥರು, ಮಾವಂದಿರು, ಅಳಿಯಂದಿರು ಹಾಗೂ ಬಂಧು-ಮಿತ್ರರು.

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇದ್ದವರು, ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಶ್ರೀಮತಿ ಸಿದ್ದಮ್ಮ ನಿಧನ



ದಾವಣಗೆರೆ ನಿಟುವಳ್ಳಿ ವಾಸಿ ಬಿ.ಜಿ. ಬಸವರಾಜಪ್ಪ ತೆರಿಗೆ ಸಲಹೆಗಾರರು ಇವರ ತಾಯಿಯವರಾದ
**ಶ್ರೀಮತಿ ಸಿದ್ದಮ್ಮ**
ಇವರು ದಿನಾಂಕ 24.10.2021ರ ಭಾನುವಾರ ಸಂಜೆ 4.15ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.10.2021ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಜಗಳೂರು ತಾಲ್ಲೂಕಿನ ಕಟ್ಟಿಗೆಹಳ್ಳಿ ಗ್ರಾಮದ ಇವರ ಜಮೀನಿನಲ್ಲಿ ನೆರವೇರಲಿದೆ.
**ಇಂತಿ ದುಃಖತಪ್ತ ಕುಟುಂಬ ವರ್ಗ**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 23.10.2021ರಂದು ನಿಧನರಾದ ಹರಿಹರ ತಾ. ಎಕ್ಕೆಗೊಂದಿ ಗ್ರಾಮದ ನ್ಯಾಯಬೆಲೆ ಅಂಗಡಿ ಮಾಲೀಕರಾದ
**ಶ್ರೀ ಪೂಜಾರ್ ರೇವಣಸಿದ್ದಪ್ಪ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ, ಭಗವಂತ ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

- ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಕರ್ನಾಟಕ ರಾಜ್ಯ ಪಡಿತರ ವಿತರಕರ ಕ್ಷೇಮಾಭಿವೃದ್ಧಿ ಸಂಘ (ರಿ), ಬೆಂಗಳೂರು.
- ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಜಿಲ್ಲಾ ಪಡಿತರ ವಿತರಕರ ಕ್ಷೇಮಾಭಿವೃದ್ಧಿ ಸಂಘ (ರಿ), ದಾವಣಗೆರೆ.
- ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ತಾಲ್ಲೂಕು ಪಡಿತರ ವಿತರಕರ ಕ್ಷೇಮಾಭಿವೃದ್ಧಿ ಸಂಘ (ರಿ), ಹರಿಹರ ಮತ್ತು ಹರಿಹರ ತಾಲ್ಲೂಕಿನ ಎಲ್ಲಾ ನ್ಯಾಯ ಬೆಲೆ ಅಂಗಡಿ ಮಾಲೀಕರುಗಳು

## ಶಾಲೆ ಆರಂಭ

ಎಷ್ಟೋ ದಿನದಿಂದ ಕಾದ ಕನಸು ಈಡೇರಿದೆ
ಕಷ್ಟಪಟ್ಟು ಶಾಲೆಯ ಬಾಗಿಲು ತೆರೆದಿದೆ
ಇಷ್ಟದಿಂದ ಕುಣಿಯುತ್ತ ಹೊರಟೆವು ನಾವೆಲ್ಲಾ
ಶ್ರೇಷ್ಠ ವಿದ್ಯೆ ಕಲಿಯಲು ಹೊರಟೆವೆಲ್ಲಾ

ಕೊರೊನಾದ ಭಯ ನಿವಾರಣೆಯಾಗಿ
ತರುತಿದೆ ಎಲ್ಲರಲಿ ಭರವಸೆ ಬೆಳಕಾಗಿ
ಬಾರದಿರಲಿ ಯಾವ ವಿಘ್ನವು ಎಂಬುದಾಗಿ
ಕೋರಿ ದೈವದ ಕೃಪೆಗಾಗಿ

ಮಕ್ಕಳಲಿ ತುಂಬಿದೆ ಉತ್ಸಾಹ
ಅಕ್ಕರೆಯಲಿ ನೀಡೋಣ ಪ್ರೋತ್ಸಾಹ
ಜೀಕುವಾಸೆ ಶಾಲೆಯ ಉಯ್ಯಾಲೆ ಯಲಿ
ಸಾಕು ಇನ್ನು ಮೊಬೈಲ್ ಹಾವಳಿ

ಹಾರುತಿವೆ ಹಕ್ಕಿಗಳು ಹೊಸಭಾವದಿ
ತರುತಿದೆ ಸಂತಸ ದಿನದಿನದಿ
ಇರುಳು ಕಳೆದು ಹೊಂಗಿರಣ ಮೂಡಿದೆ
ಹರಡಿದೆ ಹರುಷದ ಹೊನಲು ಮನದಿ

- **ಕೋಮಲ ವಿ.ಕುಮಾರ್**, ದಾವಣಗೆರೆ.

# ಸಮಾಜಕ್ಕೆ ಮಹತ್ತರ ಕೊಡುಗೆ ನೀಡುತ್ತಿರುವ ಸಿವಿಲ್ ಇಂಜಿನಿಯರಿಂಗ್

ದಾವಣಗೆರೆ, ಅ.24- ಇಂಜಿನಿಯರಿಂಗ್ ಕ್ಷೇತ್ರದ ಸಿವಿಲ್ ವಿಭಾಗವು ಸಮಾಜಕ್ಕೆ ತನ್ನದೇ ಮಹತ್ತರ ಕೊಡುಗೆ ನೀಡುತ್ತಿದೆ ಎಂದು ಹಿರಿಯ ಸಿವಿಲ್ ಇಂಜಿನಿಯರ್ ಆಗಿರುವ ಕಲಾವಿದ ಆರ್.ಟಿ. ಅರುಣ್ ಕುಮಾರ್ ಅನೇಕ ಉದಾಹರಣೆಗಳೊಂದಿಗೆ ಪ್ರತಿಪಾದಿಸಿದ್ದಾರೆ.

ನಗರದ ಲಯನ್ಸ್ ಕ್ಲಬ್ ವತಿಯಿಂದ ಲಯನ್ಸ್ ಭವನದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಇಂಜಿನಿಯರ್ಸ್ ದಿನಾಚರಣೆ ಮತ್ತು ಸೇವಾ ಕಾರ್ಯಕ್ರಮಗಳ ಸಂದರ್ಭದಲ್ಲಿ ತಮಗೆ ನೀಡಿದ ಸನ್ಮಾನವನ್ನು ಸ್ವೀಕರಿಸಿ ಅವರು ಮಾತನಾಡಿದರು.



ಸರ್ ಎಂ. ವಿಶ್ವೇಶ್ವರಾಯ ಅವರು ಕೇವಲ ಸಿವಿಲ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಮಾತ್ರವಲ್ಲದೇ, ಸಾಮಾಜಿಕವಾಗಿ, ಶಿಕ್ಷಣ ತಜ್ಞರಾಗಿ, ಅರ್ಥ ಶಾಸ್ತ್ರಜ್ಞರಾಗಿ, ರಾಜ ತಂತ್ರಜ್ಞರಾಗಿ ನಮ್ಮ ಸಮಾಜದ ನಾಗರಿಕತೆಗೆ ಮೆರಗು ನೀಡಿದ ಮಹಾಚೇತನ ಎಂದು ಅರುಣ್ ಕುಮಾರ್ ಬಣ್ಣಿಸಿದರು.

ಸಿವಿಲ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಸಲ್ಲಿಸಿದ ಅನುಪಮ ಸೇವೆಗಾಗಿ ವಿಶ್ವೇಶ್ವರಾಯ ಅವರ ಹುಟ್ಟು ಹಬ್ಬವನ್ನು ಇಂಜಿನಿಯರ್ಸ್ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ ಎಂದು ಹೇಳಿದ ಅವರು, ಇಂತಹ ದಿನದ ಸಂದರ್ಭದಲ್ಲಿ ಲಯನ್ಸ್ ಸಂಸ್ಥೆಯು ತಮ್ಮನ್ನು ಅಭಿನಂದಿಸಿ, ಸನ್ಮಾನಿಸಿರುವುದು ತಮ್ಮ ಜೀವನ ಸಾರ್ಥಕವಾಗಿದೆ ಎಂದು ಆರ್.ಟಿ. ಭಾವನಾತ್ಮಕವಾಗಿ ಕೃತಜ್ಞತೆ ಸಲ್ಲಿಸಿದರು.

ವಿಶ್ವೇಶ್ವರಾಯ ಅವರ ಯಾವುದೇ ಒಂದು ಕ್ಷೇತ್ರದ ಶೇ. 1 ರಷ್ಟು ಕೆಲಸವನ್ನು ನಾವು ಮಾಡಿದ್ದೇ ಆದಲ್ಲಿ ಸಮಾಜಕ್ಕೆ ಮಹತ್ವದ ಕೊಡುಗೆ ನೀಡಿದಂತೆ ಎಂದು ಅಭಿಪ್ರಾಯಪಟ್ಟ ಅವರು, ವಿಶ್ವೇಶರಾಯ ಅವರಂತಹ ಸಾಧಕರು ಮತ್ತು ಮಹನೀಯರ ಹುಟ್ಟುಹಬ್ಬಗಳನ್ನು ಆಚರಿಸುವುದರ ಮೂಲಕ ಅವರ ಸಾಮಾಜಿಕ ಸೇವೆಯನ್ನು ಹೊಸ ಪೀಳಿಗೆಗೆ ಪರಿಚಯ ಮಾಡಿಕೊಡುವ ಕೆಲಸ ಲಯನ್ಸ್‌ನಂತಹ ಸಂಸ್ಥೆಗಳಿಂದ ಆಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ತಮ್ಮ ವೈಯಕ್ತಿಕ ವಿಚಾರವನ್ನು ಪ್ರಸ್ತಾಪಿಸಿದ ಅರುಣ್ ಕುಮಾರ್, ತಾವು ಕ್ಯಾನ್ಸರ್ ಎದುರಿಸಲು ಆತ್ಮಸ್ಥೈರ್ಯ ಮುಖ್ಯವೆನಿಸಿದರೂ, ಆ ಸ್ಥೈರ್ಯ ತುಂಬಿದವರು ನನ್ನ ಗೆಳೆಯರು ಮತ್ತು ಲಯನ್ಸ್‌ನಂತಹ ಸಂಘಟನೆಗಳು ಎಂದರು. ಇದರಿಂದಾಗಿ ತಾವು ಮತ್ತೆ ಕ್ರಿಯಾತ್ಮಕ ಹಾಗೂ ಕಲಾತ್ಮಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಕಾರಣವಾಗಿದೆ ಎಂದು ಅವರು ಧನ್ಯವಾದ ಸಲ್ಲಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಿವಿಲ್ ಇಂಜಿನಿಯರ್ ಆಗಿರುವ ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಂ. ಜಯಕುಮಾರ್, ಒಂದು ನಗರ ಅಥವಾ ದೇಶದ ಅಭಿವೃದ್ಧಿ ಸಿವಿಲ್ ಇಂಜಿನಿಯರ್‌ಗಳನ್ನು ಅವಲಂಬಿಸಿದೆ ಎಂದು ಮಾರ್ಮಿಕವಾಗಿ ವಿಶ್ಲೇಷಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ರಾಣೇಬೆನ್ನೂರಿನ ಆರೋಗ್ಯ ಸಲಹೆಗಾರ ರವೀಂದ್ರ ಕುಲಕರ್ಣಿ, ಆರೋಗ್ಯ ಮತ್ತು ಮಾನಸಿಕ ನೆಮ್ಮದಿ ಜೀವನದಲ್ಲಿನ ಯಾವುದೇ ಸಾಧನೆಗೆ ಪ್ರೇರಕ ಶಕ್ತಿಯಾಗಿವೆ ಎಂದು ಪ್ರತಿಪಾದಿಸಿದರು.

ಲಯನ್ಸ್ ಪ್ರಾಂತೀಯ ಅಧ್ಯಕ್ಷ ಇ.ಎಂ. ಮಂಜುನಾಥ, ವಲಯಾಧ್ಯಕ್ಷ ಎಸ್. ವೆಂಕಟಾಚಲಂ, ನಗರ ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ.ಶೆಟ್ಟಿ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

> ಸಿವಿಲ್ ಇಂಜಿನಿಯರ್ ಆಗಿದ್ದ ಸರ್ ಎಂ. ವಿಶ್ವೇಶ್ವರಾಯ ಅವರು ಈ ಕ್ಷೇತ್ರದಲ್ಲಿ ಮಾಡಿದ ಅನೇಕ ಗುರುತರ ಸೇವೆಗಳಿಂದಾಗಿ ಇಡೀ ಪ್ರಪಂಚದಲ್ಲಿ ಸಿವಿಲ್ ಇಂಜಿನಿಯರಿಂಗ್ ಬಗ್ಗೆ ಅತೀ ದೊಡ್ಡ ಮಾನ್ಯತೆ ದೊರೆಯುವಂತಾಗಿದೆ.
>
> **- ಆರ್.ಟಿ. ಅರುಣ್ ಕುಮಾರ್**
> ಸಿವಿಲ್ ಇಂಜಿನಿಯರ್ ಮತ್ತು ಕಲಾವಿದ

ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದ ಸಿವಿಲ್ ಇಂಜಿನಿಯರ್ ಹೆಚ್.ವಿ.ಮಂಜುನಾಥ ಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕಿನ ಪಿಗ್ಮಿ ಸಂಗ್ರಹಕಾರರಾದ ಸಂಗಪ್ಪ ತೋಟದ್ ಅವರ ಪ್ರಾರ್ಥನೆ ನಂತರ ಲಯನ್ಸ್ ಕ್ಲಬ್ ಕಾರ್ಯದರ್ಶಿ ಕೋರಿ ಶಿವಕುಮಾರ್ ಸ್ವಾಗತಿಸಿದರು. ಲಯನ್ಸ್ ಕ್ಲಬ್ ನಿರ್ದೇಶಕ ಬಿ.ಎಸ್. ಶಿವಾನಂದ್ ಅವರು ಧ್ವಜವಂದನೆ ನಡೆಸಿಕೊಟ್ಟರು.

ಲಯನ್ಸ್ ಕ್ಲಬ್ ಖಜಾಂಚಿ ಕಣವಿ ನಟರಾಜ್, ಸಹ ಕಾರ್ಯದರ್ಶಿ ಎಸ್.ಕೆ. ಮಲ್ಲಿಕಾರ್ಜುನ್ ಅವರುಗಳು ಕಾರ್ಯಕ್ರಮ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.

## ಶೋಷಿತರ ದನಿಯಾಗಿದ್ದ ಹೆಚ್‌ಕೆಆರ್

**(1ನೇ ಪುಟದಿಂದ)** ಸೋಲಿಸುವ ಕೆಲಸ ಮಾಡಬೇಕಾಗಿದೆ. ದುಡಿಯುವ ವರ್ಗದವರ, ದುರ್ಬಲರ ಪರವಾದ ಹೋರಾಟಗಳನ್ನು ಗಟ್ಟಿಗೊಳಿಸುವ ಅಗತ್ಯವಿದೆ ಎಂದರು.

ಸಿಪಿಐ ಖಜಾಂಚಿ ಆನಂದರಾಜ್ ಅಧ್ಯಕ್ಷತೆ ವಹಿಸಿದ್ದರು. ಹೊಸತು ಪತ್ರಿಕೆ ಸಂಪಾದಕ ಡಾ. ಸಿದ್ಧನಗೌಡ ಪಾಟೀಲ್, ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯ ಪಿ.ವಿ. ಲೋಕೇಶ್, ಕಾರ್ಮಿಕ ಮುಖಂಡರಾದ ಕೆ.ಎಸ್. ಜನಾರ್ದನ್, ಹೆಚ್.ಜಿ. ಉಮೇಶ್ ಆವರಗೆರೆ, ಪಿ.ಬಿ. ಚಂದ್ರು ಆವರಗೆರೆ, ಟಿ.ಎಸ್. ನಾಗರಾಜ್, ಆವರಗೆರೆ ವಾಸು, ವಕೀಲರಾದ ಎಲ್. ಹೆಚ್. ಅರುಣ್ ಕುಮಾರ್, ಹಾವೇರಿಯ ಹೊನ್ನಪ್ಪ ಮರೆಮ್ಮನವರ್, ಕೆ. ರಾಘವೇಂದ್ರ ನಾಯರಿ, ಎನ್. ಶಿವಣ್ಣ ಮತ್ತಿತರರು ಉಪಸ್ಥಿತರಿದ್ದರು.

ಭಾರತೀಯ ಜನ ಕಲಾ ಸಮಿತಿ ಕಲಾವಿದರು ಜಾಗೃತಿ ಗೀತೆಗಳನ್ನು ಹಾಡಿದರು.

# ಪ್ರವರ್ಗ-1ರ ಜಾತಿಗಳು ಸಂಘಟಿತರಾಗಲಿ

**(1ನೇ ಪುಟದಿಂದ)** ಬಂದಂತಾಗುತ್ತದೆ ಎಂದು ಅಭಿಪ್ರಾಯಿಸಿದರು

ಕಡಿಮೆ ಸಂಖ್ಯೆ ಜನ ಹೊಂದಿರುವ ಯಾವುದೇ ಜಾತಿ ಪ್ರತ್ಯೇಕವಾಗಿ ಹೋರಾಟ ನಡೆಸಿ ಮೀಸಲಾತಿ ಪಡೆಯಲು ಸಾಧ್ಯವಿಲ್ಲ. ಜನ ಸಂಖ್ಯೆ ನೋಡಿ ರಾಜಕಾರಣಿಗಳು ಜಾತಿಗಳಿಗೆ ಪ್ರಾಧಾನ್ಯತೆ ನೀಡುತ್ತಾರೆ. ಈ ಹಿನ್ನೆಲೆಯಲ್ಲಿ ಸತತ 1 ವರ್ಷಗಳ ಕಾಲ ಸುತ್ತಾಡಿ ಪ್ರವರ್ಗ1 ರ ಒಕ್ಕೂಟ ರಚನೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಎಲ್ಲರೂ ಸಂಘಟಿತರಾಗಿ ಉಗ್ರ ಹೋರಾಟಕ್ಕೆ ಅಣಿಯಾಗಬೇಕಿದೆ ಎಂದು ಹೇಳಿದರು.

ಶೋಷಿತ ಸಮುದಾಯದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ ಆರಂಭಿಸಲು ಚಿಂತನೆ ನಡೆಸಿದೆ. ಹಿಂದುಳಿದ ವರ್ಗದ ಯುವಕರು ಪ್ರಬಲ ಜಾತಿ ನಾಯಕರ ಮದ್ಯದ ಬಾಟಲಿಗೆ ಮದ್ಯ ತುಂಬುವ ಕೆಲಸಕ್ಕಷ್ಟೇ ಸೀಮಿತರಾಗದೇ ಉತ್ತಮ ವಿದ್ಯಾಭ್ಯಾಸ ಮಾಡಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ, ಉತ್ತಮ ಹುದ್ದೆಗಳನ್ನು ಪಡೆಯಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶೋಷಿತ ವರ್ಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜ್, ಮುಂದುವರಿದ ಜಾತಿಯ ಜನರಿಗೆ ಉಪ್ಪು ಬೇಕಿದೆ. ಆದರೆ ಉಪ್ಪಾರರು ಬೇಕಿಲ್ಲ. ಹಾಲು, ಮೊಸಲು ಬೇಕಿದೆ ಆದರೆ ಗೊಲ್ಲರು ಬೇಕಿಲ್ಲ. ಇತಿಹಾಸವಿರುವ ಇಂತಹ ಸಮುದಾಯಗಳು ಇಂದು ಮೀಸಲಾತಿಗಾಗಿ ಭಿಕ್ಷೆ ಬೇಡುತ್ತಿರುವುದು ದುರಂತ. ಪ್ರವರ್ಗ1ರಡಿ ಬರುವ ಎಲ್ಲಾ ಜಾತಿಗಳು ಸಂಘಟಿತರಾದರೆ ಮಾತ್ರ, ನಮ್ಮ ಬಲಾಬಲ ತೋರಿಸಲು ಸಾಧ್ಯವಾಗುತ್ತದೆ ಎಂದರು.

ಒಕ್ಕೂಟದ ಕಾರ್ಯಾಧ್ಯಕ್ಷ ಹೆಚ್.ಬಿ. ಬಂಡಿ, ಪ್ರಧಾನ ಕಾರ್ಯದರ್ಶಿ ಎ.ಬಿ. ಲೋಕೇಶ್, ನಗರ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ಉಮಾ ಪ್ರಕಾಶ್, ವಿವಿಧ ಸಮಾಜಗಳ ಮುಖಂಡರುಗಳಾದ ಜಗದೀಶ್, ವಿಠಲ ಯಾದವ್, ಉಮಾ ಶಂಕರ್, ಎಸ್.ಬಸವರಾಜಪ್ಪ, ತಿಪ್ಪೇಸ್ವಾಮಿ, ಮುರುಗಣ್ಣ. ಜಯರಾಂ, ಮಣಿಕಂಠ, ಪೂರ್ಣಿಮಾ, ನರಸಿಂಹಮೂರ್ತಿ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಅಪರೂಪದ ಚಿತ್ರ ಕಲಾವಿದ ಜಯಕುಮಾರ್ ಸಾಣಿಕೆ



ದಾವಣಗೆರೆ, ಅ.24- ಹರಿಹರ ತಾಲ್ಲೂಕಿನ ಜಯಕುಮಾರ್ ಕೆ. ಸಾಣಿಕೆ ಅವರು ಅಮೋಘ ಚಿತ್ರಕಲಾವಿದರಾಗಿದ್ದು, ತಮ್ಮ ಅದ್ಭುತ ಪ್ರತಿಭೆಯಿಂದ ಮಧ್ಯ ಕರ್ನಾಟಕ ಭಾಗದಲ್ಲಿ ಹೆಸರಾಗಿದ್ದಾರೆ. ಕಡುಬಡತನದಲ್ಲೇ ಬೆಳೆದರೂ, ಕಳೆದ 10 ವರ್ಷಗಳಿಂದ ಕಲಾಕ್ಷೇತ್ರಕ್ಕೆ ತಮ್ಮದೇ ರೀತಿಯಲ್ಲಿ ಎಲೆಮರೆಯ ಕಾಯಿಯಂತೆ ಇದ್ದು, ವಿಶಿಷ್ಟ ಸೇವೆ ಸಲ್ಲಿಸುತ್ತಿದ್ದಾರೆ. ಅವರಿಗೆ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಗೆ ಪರಿಗಣಿಸುವುದರ ಮೂಲಕ ನೈಜ ಪ್ರತಿಭೆಗಳಿಗೆ ಉತ್ತೇಜನ ನೀಡಬೇಕು ಎಂದು ವಿವಿಧ ಸಂಘಟನೆಗಳು ಅಭಿಪ್ರಾಯಪಟ್ಟಿವೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಚಾಲೆಂಜಿಂಗ್ ಸ್ಟಾರ್ ದರ್ಶನ್, ಕಿಚ್ಚ ಸುದೀಪ್, ಪುನೀತ್ ರಾಜ್‌ಕುಮಾರ್, ಸಿಹಿಕಹಿ ಚಂದ್ರು, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸೇರಿದಂತೆ, ಅನೇಕ ಗಣ್ಯಮಾನ್ಯರ ಎದುರು ತಮ್ಮ ಚಿತ್ರಕಲೆಯ ಪ್ರತಿಭೆ ಅನಾವರಣಗೊಳಿಸಿದ್ದಾರೆ.

ಬಹುಮುಖ ಪ್ರತಿಭೆಯ ಚಿತ್ರಕಲಾವಿದ ಜಯಕುಮಾರ್ ಅವರಿಗೆ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಬೇಕೆಂದು ಸಿರಿಗನ್ನಡಂ ವಿಕಲಚೇತನರ ಸೇವಾ ಚಾರಿಟಬಲ್ ಟ್ರಸ್ಟ್, ಸಮಗಾರ ಸಮಾಜ, ಗೌತಮ್ ಸಂಸ್ಥೆ, ವಿವಿಧ ಸಂಘಗಳ ಒಕ್ಕೂಟದ ಅಧ್ಯಕ್ಷ ರಮೇಶ್ ಜೆ. ವತನ್, ಕಾಮನಬಿಲ್ಲು ಗ್ರಾಮೀಣಾಭಿವೃದ್ಧಿ ಸಹಕಾರ ಸಂಘ, ಶನೇಶ್ವರ ದೇವಸ್ಥಾನ ಸಮಿತಿ, ಪರಿಸರ ಪ್ರೇಮಿಗಳ ಸಂಘ, ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ ಇನ್ನೂ ಮುಂತಾದ ಸಂಘಟನೆಗಳು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿವೆ.

ಈ ಸಂದರ್ಭದಲ್ಲಿ ರಾಜೇಶ್ವರಿ ಆರ್. ವತನ್, ಟಿ. ವೆಂಕಟೇಶ ಕಣ್ಣಾಳರ್, ನಿರಂಜನ ಬಾಬು ತೆಲಗಾವಿ, ದುಗ್ಗೇಶ್, ಶಿವಕುಮಾರ್, ನಿಂಗಪ್ಪ, ಸಂತೋಷ್ ಭಾನುವಳ್ಳಿ, ಬಸವರಾಜ್ ಮತ್ತಿತರರು ಇದ್ದರು.

## ಭಾರತ ಇತಿಹಾಸಕ್ಕೆ ಸಾವಿಲ್ಲ

**(1ನೇ ಪುಟದಿಂದ)** ಇತಿಹಾಸ ಸೃಷ್ಟಿ ಮಾಡುವಂತಹ ಪರಂಪರೆ ಭಾರತಕ್ಕೆ ಮಾತ್ರ ಇದೆ. ರತ್ನ ಗರ್ಭ ಭಾರತವು ಆಕ್ರಮಣಗಳಿಗೆ ತುತ್ತಾಗಿ, 'ಭಾರತ ಸ್ವಾತಂತ್ರ್ಯ' ಶಬ್ದ ದಲ್ಲಿ 'ಸ್ವ' ದಲ್ಲಿ ಸ್ವಂತಿಕೆ ಹೇಳುವಂತವರು ಇಲ್ಲದೆ ಇರುವುದರಿಂದ ಸ್ವಾತಂತ್ರ್ಯದ ಬಗ್ಗೆ ಮತ್ತೆ ಹೇಳಬೇಕಾಗಿದೆ ಎಂದರು.

ಭಾರತದಲ್ಲಿ ಹುಣ್ಣಿಮೆ-ಅಮವಾಸ್ಯೆ ಪಂಚಾಂಗ ಪ್ರಾರಂಭವಾಗಿದ್ದು ಸಂಘದಿಂದ. ಈ ಸಂಘ ವಿಜಯ ದಶಮಿಯಂದು ಪ್ರಾರಂಭಗೊಂಡಿದ್ದರಿಂದ ಪಥಸಂಚಲನವನ್ನು ವಿಜಯ ದಶಮಿಯಂದು ಆಚರಣೆ ಮಾಡಲಾಗುತ್ತದೆ ಎಂದರು. ರಾಷ್ಟ್ರದ ಒಳಿತಿಗಾಗಿ ದಿನದಲ್ಲಿ ಒಂದು ಗಂಟೆ ದೇಶದ ಭಕ್ತರಲ್ಲಿ ವ್ಯಕ್ತಿತ್ವ ನಿರ್ಮಾಣ ಮಾಡುವ ಕೆಲಸವನ್ನು ರಾಷ್ಟ್ರೀಯ ಸ್ವಯಂ ಸೇವಾ ಸಂಘ ಮಾಡುತ್ತದೆ. ಕೊರೊನಾ ಸಮಯದಲ್ಲಿ ವೈದ್ಯರು ಮಾಡುವ ಸೇವೆಯನ್ನು ರಾಷ್ಟ್ರೀಯ ಸ್ವಯಂ ಸೇವಕರು ಮಾಡಿದ್ದಾರೆ ಎಂದರು.

ರಾಘವೇಂದ್ರ ಸ್ವಾಮಿ ಮಠದ ಅಧ್ಯಕ್ಷ ಎ.ಬಿ. ಸಿ. ಬಸವರಾಜ್ ಅಮರಾವತಿ ಮಾತನಾಡಿ, ಇತ್ತೀಚೆಗೆ ಹಣ ಕೊಟ್ಟು ಮತಾಂತರ ಮಾಡ ಹೊರಟಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ನಗರಸಭೆ ನಾಮಿನಿ ಸದಸ್ಯರಾದ ಹೆಚ್.ಎಸ್. ರಾಘವೇಂದ್ರ, ಮಾಲತೇಶ್ ಭಂಡಾರಿ, ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಶಿವಪ್ರಕಾಶ್ ಶಾಸ್ತ್ರಿ, ಡಾ ಖಮಿತ್ಕರ್, ಧರಣೇಂದ್ರ, ಶಿವು, ದಿನೇಶ್ ಕೊಣ್ಣೂರು, ಉಲ್ಲಾಸ್ ನೀಲಗುಂದ, ಅನಂತ್, ಶಿವಪ್ರಸಾದ್, ರೋಹಿತ್, ಚೇತನ್ ಕುಮಾರ್, ಅದ್ವೈತ ಶಾಸ್ತ್ರಿ, ಸುನಿಲ್, ರವಿ ರಾಯ್ಕರ್, ಚಂದನ್ ಮೂರ್ಕಲ್ ಇತರರು ಹಾಜರಿದ್ದರು.

ಸಿಪಿಐ ಸತೀಶ್ ಕುಮಾರ್, ಪಿಎಸ್‌ಐಗಳಾದ ಸುನೀಲ್ ಬಸವರಾಜ್, ಮಲೇಬೆನ್ನೂರು ಠಾಣೆ ಪಿಎಸ್‌ಐ ಡಿ.ರವಿಕುಮಾರ್, ಗ್ರಾಮಾಂತರ ಠಾಣೆಯ ವೀರಬಸಪ್ಪ ಕುಸಲಾಪುರ ಸೂಕ್ತ ಬಂದೋ ಬಸ್ತ್ ಏರ್ಪಡಿಸಿದ್ದರು.

## ಸುಳ್ಳು ಬಿಜೆಪಿ ರಕ್ತದಲ್ಲಿಯೇ ಇದೆ

ದಾವಣಗೆರೆ, ಅ. 24- ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಚುನಾ ವಣೆ ಸಂದರ್ಭದಲ್ಲಿ ಹಣ ಹಂಚುವುದು ಕಾಂಗ್ರೆಸ್ ರಕ್ತದಲ್ಲಿಯೇ ಬಂದಿದೆ ಎಂದು ಉಡಾಫೆಯಾಗಿ ಹೇಳಿಕೆ ನೀಡಿದ್ದಾರೆ ಎಂದು ಕೆಪಿಸಿ ಸಿ ಸಾಮಾಜಿಕ ಜಾಲತಾಣದ ರಾಜ್ಯ ಕಾರ್ಯದರ್ಶಿ ಕೆ.ಎಲ್. ಹರೀಶ್ ಖಂಡಿಸಿದ್ದಾರೆ. ಚುನಾವಣೆಯಲ್ಲಿ ಬಿಜೆಪಿ ಕುತಂತ್ರ ಹಾಗೂ ಸುಳ್ಳು ಹೇಳಿಯಾದರೂ ಚುನಾವಣೆ ಗೆಲ್ಲುತ್ತೇವೆ ಎಂದು ತಮ್ಮ ಪಕ್ಷದ ಸಚಿವರು ಹಾಗೂ ಮಾಜಿ ಸಚಿವರು ಬಹಿರಂಗವಾಗಿಯೇ ಹೇಳಿಕೆ ನೀಡಿದ್ದಾರೆ, ಇದರ ಅರ್ಥ ನಿಮ್ಮ ಪಕ್ಷದ ರಕ್ತದಲ್ಲಿಯೇ ಕುತಂತ್ರ ಮತ್ತು ಸುಳ್ಳು ಅಡಗಿರಬೇಕು, ಹಾಗಾಗಿ ನೀವು ಬೇರೆಯವರ ಬಗ್ಗೆ ಆಧಾರ ರಹಿತ ಆರೋಪ ಮಾಡುತ್ತಿರುವುದು ಎಷ್ಟು ಸರಿ ಎಂದು ಅವರು ಕೇಳಿದ್ದಾರೆ.

ಶಾಸಕ ಎಸ್.ಎ. ರವೀಂದ್ರನಾಥ್ ಅವರು ಚುನಾವಣೆಯಲ್ಲಿ ಕುತಂತ್ರದಿಂದ ಚುನಾವಣೆ ಗೆಲ್ಲುತ್ತೇವೆ ಎಂದು ಹೇಳಿದ್ದಾರೆ, ಸಚಿವ ಕೆ.ಎಸ್. ಈಶ್ವರಪ್ಪ ಅವರೂ ಬಹಿರಂಗ ಸಭೆಯಲ್ಲಿಯೇ ಕಾರ್ಯಕರ್ತರಿಗೆ, ಮತದಾರರಿಗೆ ಸುಳ್ಳು ಹೇಳಿ... ನೀವು ಹೇಳುವುದು ಸುಳ್ಳು, ಸತ್ಯವೆಂದು ಅವರಿಗೆಲ್ಲಿ ಗೊತ್ತಾಗುತ್ತದೆ ಎಂದು ಪ್ರಚೋದನೆ ನೀಡಿದ್ದಾರೆ, ಸಂಸದರು ಇದನ್ನು ಮರೆತು ಹಣ ಮತ್ತು ಅಧಿಕಾರದ ದರ್ಪದಿಂದ ಕಾಂಗ್ರೆಸ್ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಹರೀಶ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮನೆಗೆಲಸ ನೆಪದಲ್ಲಿ ಕಳ್ಳತನ : ಬಂಧನ

ದಾವಣಗೆರೆ, ಅ.24- ನಂಬಿಕಸ್ಥನಂತೆ ನಟಿಸಿ ಕೆಲಸಕ್ಕೆ ಸೇರಿ ಫಾರ್ಮ್ ಹೌಸ್ ಮಾಲೀಕರ ಮನೆಯಲ್ಲಿದ್ದ ಚಿನ್ನಾಭರಣ, ನಗದು ದೋಚಿ ಪರಾರಿಯಾಗಿದ್ದ ಆರೋಪಿಯನ್ನು ಚನ್ನಗಿರಿ ಪೊಲೀಸರು ಬಂಧಿಸಿ, ಈತನಿಂದ 6.60 ಲಕ್ಷ ರೂ. ಮೌಲ್ಯದ ಬಂಗಾರದ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ವಿಜಯ್ ಕೋಲಾರ ಬಂಧಿತ ಆರೋಪಿ. ಚನ್ನಗಿರಿಯ ಕಣದಸಾಲು ಬಡಾವಣೆಯ ಸಿ.ಹೆಚ್. ಶಿವಮೂರ್ತಿ ಅವರು ವಿ.ಆರ್. ಬಡಾವಣೆಯಲ್ಲಿ ಕುರಿ ಫಾರ್ಮ್ ಹೌಸ್ ಮಾಡಿದ್ದು, ಅದರ ಬಗ್ಗೆ ಯುಟ್ಯೂಬ್ ನಲ್ಲಿ ಪ್ರಚಾರಕ್ಕೆ ಬಿಟ್ಟಾಗ, ಕೋಲಾರ ಪುರಸಭೆಯಲ್ಲಿ ಪೌರ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವ ಲಕ್ಷ್ಮಮ್ಮ ಎಂಬುವವರ ಮಗನೆಂದು ಹೇಳಿ, ತನಗೆ ಹೈನುಗಾರಿಕೆಯಲ್ಲಿ 5 ವರ್ಷ ಕೆಲಸ ಮಾಡಿದ ಅನುಭವಿರುವುದಾಗಿ ನಂಬಿಸಿ, ಕಾಡಿ ಬೇಡಿ ಅ. 1ರಂದು ಕೆಲಸಕ್ಕೆ ಸೇರಿದ್ದ. ಅ.7 ರಂದು ಸಂಜೆ ಫಾರ್ಮ್ ಹೌಸ್‌ನಿಂದ ಮಾಲೀಕ ಶಿವಮೂರ್ತಿ ಅವರ ಮನೆಗೆ ಟೀ ಕುಡಿಯಲೆಂದು ಬಂದಿದ್ದ ವಿಜಯ್‌ಗೆ ಶಿವಮೂರ್ತಿ ಅವರ ಪತ್ನಿ ಟೀ ಕೊಟ್ಟು ಬಟ್ಟೆ ತರಲು ಮಹಡಿ ಮೇಲೆ ಹೋಗಿದ್ದರು.

ಈ ಸಮಯವನ್ನೇ ಬಂಡವಾಳವಾಗಿಸಿಕೊಂಡ ಆರೋಪಿಯು ಮನೆಯೊಳಗೆ ಹೋಗಿ ಬೀರುವಿನ ಲ್ಲಿದ್ದ ಸುಮಾರು 8.20 ಲಕ್ಷ ರೂ. ಮೌಲ್ಯದ ಬಂಗಾರ ಮತ್ತು 20 ಸಾವಿರ ನಗದು ದೋಚಿ ಪರಾರಿಯಾಗಿದ್ದ ಎಂದು ಆರೋಪಿಸಲಾಗಿತ್ತು.

ಚನ್ನಗಿರಿ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕ ಕೆ.ಎಂ. ಸಂತೋಷ್ ಮಾರ್ಗದರ್ಶನ ದಲ್ಲಿ ಚನ್ನಗಿರಿ ಪೊಲೀಸ್ ನಿರೀಕ್ಷಕ ಪಿ.ಬಿ. ಮಧು ನೇತೃತ್ವದಲ್ಲಿ ಪಿಎಸ್‌ಐ ಚಂದ್ರಶೇಖರ್, ಅಪರಾಧ ವಿಭಾಗದ ಸಿಬ್ಬಂದಿಗಳಾದ ರುದ್ರೇಶ್, ರೇವಣಸಿದ್ದಪ್ಪ, ಪ್ರವೀಣ್ ಗೌಡ, ರುದ್ರೇಶ್, ಮಂಜುನಾಥ ಪ್ರಸಾದ್, ರೇವಣಸಿದ್ದಪ್ಪ ಒಳಗೊಂಡ ಪೊಲೀಸ್ ತಂಡವು ಆರೋಪಿಯನ್ನು ಸೆರೆ ಹಿಡಿದಿದೆ.

## ಶಾರುಕ್ ಖಾನ್ ಪುತ್ರ ಆರ್ಯನ್ ಬಿಡಲು ಲಂಚ

**(1ನೇ ಪುಟದಿಂದ) (1ನೇ ಪುಟದಿಂದ)** ದ್ದರು ಎಂದು ಪ್ರಕರಣದ ಸ್ವತಂತ್ರ ಸಾಕ್ಷಿಯೊಬ್ಬರು ಆರೋಪಿಸಿದ್ದಾರೆ.

ಪ್ರಕರಣದ ಸ್ವತಂತ್ರ ಸಾಕ್ಷಿಯಾಗಿರುವ ಪ್ರಭಾಕರ್ ಸೈಲ್ ಅವರು ಈ ಬಗ್ಗೆ ಹೇಳಿಕೆ ನೀಡಿದ್ದು, ತಲೆಮರೆಸಿಕೊಂಡಿರುವ ಇನ್ನೋರ್ವ ಸಾಕ್ಷಿ ಕೆ.ಪಿ. ಗೋಸಾವಿ ಅವರು ಸ್ಯಾಮ್ ಡಿಸೋಜಾ ಎಂಬುವವರ ಜೊತೆ ಮಾತನಾಡುತ್ತಾ, ಎನ್.ಸಿ.ಬಿ. ಅಧಿಕಾರಿಗಳು 25 ಕೋಟಿ ರೂ. ಲಂಚ ಕೇಳಿದ್ದಾರೆ. ಎನ್.ಸಿ.ಬಿ. ಪ್ರಾಂತೀಯ ಅಧಿಕಾರಿ ಸಮೀರ್ ವಾಂಖೆಡೆಗೆ 8 ಕೋಟಿ ರೂ. ಕೊಡಬೇಕಿದೆ ಎಂದು ಹೇಳಿದ್ದರು ಎಂದಿದ್ದಾರೆ. ಆದರೆ, ಆರೋಪ ಸುಳ್ಳು ಹಾಗೂ ದುರುದ್ದೇಶಿತ ಎಂದು ಎನ್.ಸಿ.ಬಿ. ಅಧಿಕಾರಿಗಳು ತಳ್ಳಿ ಹಾಕಿದ್ದಾರೆ.

ಗೋಸಾವಿಗೆ ಸೇಲ್ ಅಂಗರಕ್ಷಕನಾಗಿದ್ದಾರೆ. 2018ರ ಉದ್ಯೋಗ ವಂಚನೆ ಪ್ರಕರಣದಲ್ಲಿ ಗೋಸಾವಿ ತಲೆ ಮರೆಸಿಕೊಂಡಿದ್ದಾನೆ. ಮಾದಕ ದಾಳಿ ನಡೆದ ಸಂದರ್ಭದಲ್ಲಿ ಗೋಸಾವಿ ಜೊತೆ ಸೇಲ್ ಇದ್ದರು. ಈ ಸಂದರ್ಭದಲ್ಲಿ ದೂರವಾಣಿಯಲ್ಲಿ ಮಾತನಾಡಿದ ಗೋಸಾವಿ, ಲಂಚದ ಬಗ್ಗೆ ಮಾತನಾಡಿದ್ದರು ಎಂದು ಸೇಲ್ ಹೇಳಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಮುಂಬೈನ ಎನ್.ಸಿ.ಬಿ.ಯ ಡಿ.ಡಿ.ಜಿ. ಮುತ್ತ ಅಶೋಕ್ ಜೈನ್, ಸಾಮಾಜಿಕ ಮಾಧ್ಯಮದ ಮೂಲಕ ಸೇಲ್ ಹೇಳಿಕೆಯ ಬಗ್ಗೆ ತಿಳಿದು ಬಂದಿದೆ. ಸೇಲ್ ಪ್ರಕರಣದ ಸಾಕ್ಷಿಯಾಗಿದ್ದು, ವಿಚಾರಣೆ ನ್ಯಾಯಾಲಯದ ಎದುರಿದೆ. ಈ ಬಗ್ಗೆ ಸಾಮಾಜಿಕ ಮಾಧ್ಯಮಗಳ ಮೂಲಕ ಹೇಳುವುದನ್ನು ಬಿಟ್ಟು ನ್ಯಾಯಾಲಯದ ಎದುರು ಹೇಳಿಕೆ ನೀಡಬೇಕು ಎಂದಿದ್ದಾರೆ.

## ತೈಲ ಬೆಲೆ ಏರಿಕೆ 'ತೆರಿಗೆ ಡಕಾಯತಿ'



ನವದೆಹಲಿ, ಅ. 24 – ತೈಲ ಬೆಲೆ ಏರಿಕೆಗಾಗಿ ಕೇಂದ್ರ ಸರ್ಕಾರವನ್ನು ಕಾಂಗ್ರೆಸ್ ತರಾಟೆಗೆ ತೆಗೆದುಕೊಂಡಿದೆ. ತೈಲ ಬೆಲೆ ಏರಿಕೆಯನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ 'ತೆರಿಗೆ ಡಕಾಯತಿ' ಎಂದು ಬಣ್ಣಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ವಾದ್ರಾ, ಮೋದಿ ಸರ್ಕಾರ ಜನರಿಗೆ ತೊಂದರೆ ನೀಡುವುದರಲ್ಲಿ ದಾಖಲೆ ಮಾಡಿದೆ ಎಂದಿದ್ದಾರೆ. ಮೋದಿ ಸರ್ಕಾರದಲ್ಲಿ ನಿರುದ್ಯೋಗ ಅತಿ ಹೆಚ್ಚಿನ ಪ್ರಮಾಣದಲ್ಲಿದೆ, ಸರ್ಕಾರಿ ಆಸ್ತಿಗಳನ್ನು ಮಾರಲಾಗಿದೆ, ಪೆಟ್ರೋಲ್ ದರ ಏರಿಕೆಯಲ್ಲೂ ಮೋದಿ ಸರ್ಕಾರವೇ ಮುಂದಿದೆ ಎಂದವರು ಲೇವಡಿ ಮಾಡಿದ್ದಾರೆ.

ರಾಹುಲ್ ಗಾಂಧಿ ಟ್ವೀಟ್ ಮೂಲಕ ಹೇಳಿಕೆ ನೀಡಿದ್ದು, ಪೆಟ್ರೋಲ್ ಬೆಲೆಗಳ ಮೂಲಕ ತೆರಿಗೆ ಡಕಾಯಿತಿ ಮಾಡುವುದು ಹೆಚ್ಚಾಗಿದೆ. ಎಲ್ಲಾದರೂ ಚುನಾವಣೆಗಳು ನಡೆದಾಗ ಮಾತ್ರ ಸ್ವಲ್ಪ ವಿನಾಯಿತಿ ನೀಡಲಾಗುತ್ತದೆ ಎಂದಿದ್ದಾರೆ.

## ಶ್ರೀಗಳಿಂದ ಇಂದು ಕೆರೆ ವೀಕ್ಷಣೆ



**(1ನೇ ಪುಟದಿಂದ)** ಎಸ್.ವಿ.ರಾಮಚಂದ್ರ, ಸಮಾಜ ಸೇವಕ ದೇವೇಂದ್ರಪ್ಪ ಅವರಿಗೆ ಕಂಬಳಿ ಹಾಕುವ ಮೂಲಕ ಸ್ವಾಗತ ಮಾಡಿಕೊಂಡರು. ಈ ಸಂದರ್ಭದಲ್ಲಿ ಮಂಡಲ ಬಿಜೆಪಿ ಅಧ್ಯಕ್ಷ ಹೆಚ್.ಸಿ.ಮಹೇಶ್, ತಾ.ಪಂ. ಮಾಜಿ ಸದಸ್ಯ ಓಮಣ್ಣ, ಗ್ರಾಮದ ಮುಖಂಡರುಗಳು, ಗ್ರಾ.ಪಂ.ಸದಸ್ಯರುಗಳು ಉಪಸ್ಥಿತರಿದ್ದರು.

**WAREHOUSE AVAILABLE FOR RENT ON LONG/SHORT/DAILY TERM BASIS AT RAVI MILL PREMISES**

Interested Parties may contact at :
**M/s R.Hanumanthappa & Son**
Hanumanthappa Buildings,
Poona - Bangalore Road, Davangere - 577 002.
**Phone No's. : 258834 / 258836**

**REQUIRED**
Qualified Nurses(Male & Female), Helper's, CT Scan, MRI, X-Ray & Lab Technicians
**Hi-Tech Clinical Laboratories (HCL)**
S S Speciality Clinic, Modi Compound, MCC 'A' Block, Davangere - 577002.
Attend Interview between 1 PM to 2.30 PM, On 25.10.2021
Contact : Ravi M H - 9164628481
Jagadeesh .P - 63646 42825

**ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,**
# 26/2ಎ, ವಿಜಯಲಕ್ಷ್ಮಿ ರೋಡ್, ದಾವಣಗೆರೆ 577 001. ☎ : 271688 235645, GST No.: 29AABAS2774F1ZC ✉ ambabhavaniucbdvg@gmail.com

**ನಮ್ಮ ಬ್ಯಾಂಕಿನ ನೂತನ ನಿರ್ದೇಶಕರು**


ಶ್ರೀ ಸತ್ಯನಾರಾಯಣ ಆರ್.ಜಿ., ನಿರ್ದೇಶಕರು


ಶ್ರೀ ಬಾಬುರಾವ್ ಸಾಳಂಕಿ ಎಸ್., ನಿರ್ದೇಶಕರು


ಶ್ರೀ ಶಿವಾಜಿರಾವ್, ನಿರ್ದೇಶಕರು


ಶ್ರೀ ಜಗನ್ನಾಥ ಎಸ್. ಗಂಜೀಗಟ್ಟಿ, ನಿರ್ದೇಶಕರು


ಶ್ರೀ ಪಿ.ಜೆ. ಪಾಂಡುರಂಗರಾವ್, ನಿರ್ದೇಶಕರು


ಶ್ರೀ ಗಿರಿಧರ್ ಎಂ.ಡಿ., ನಿರ್ದೇಶಕರು


ಶ್ರೀ ಎ.ಸಿ. ರಾಘವೇಂದ್ರ ಮೋಹರೆ, ವಕೀಲರು, ವೃತ್ತಿಪರ ನಿರ್ದೇಶಕರು


ಶ್ರೀಮತಿ ಶಾಮಲಾ ಬಿ.ಎಂ., ನಿರ್ದೇಶಕರು


ಶ್ರೀಮತಿ ಅನಿತಾಬಾಯಿ ಜಿ., ನಿರ್ದೇಶಕರು

ನಮ್ಮ ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರ ಪೈಕಿ ಒಂಭತ್ತು ಜನರು ಒಡಂಬಡಿಕೆ ಪ್ರಕಾರ ನೀಡಿದ ರಾಜೀನಾಮೆಯಿಂದಾಗಿ ತೆರವಾದ ಸ್ಥಾನಗಳಿಗೆ ಆಯ್ಕೆಯಾಗಿರುವ ನೂತನ ನಿರ್ದೇಶಕರುಗಳನ್ನು ದಿನಾಂಕ 25.09.2021ರಂದು ನಡೆದ ಬ್ಯಾಂಕಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಸ್ವಾಗತಿಸಲಾಯಿತು. ನೂತನ ಎಲ್ಲಾ ನಿರ್ದೇಶಕರುಗಳಿಗೆ ಹಾರ್ದಿಕ ಅಭಿನಂದನೆಗಳು.

ಶ್ರೀ ಕಿರಣ್‌ಕುಮಾರ್ ಎ., ಅಧ್ಯಕ್ಷರು
ಶ್ರೀ ಪರಶುರಾಮರಾವ್ ಜಿ.ಎಂ., ಉಪಾಧ್ಯಕ್ಷರು
ಡಾ|| ತಿಪ್ಪೇಸ್ವಾಮಿ ವಿಕಬೋಟೆ, ನಿರ್ದೇಶಕರು, ಮಾಜಿ ಅಧ್ಯಕ್ಷರು
ಶ್ರೀಮತಿ ಡಾ. ರಜನಿ ಎಸ್., ನಿರ್ದೇಶಕರು
ಶ್ರೀ ಮೋಹನ್‌ರಾವ್ ವಿಕಬೋಟೆ, ನಿರ್ದೇಶಕರು
ಶ್ರೀ ಗೋಪಿನಾಥ, ನಿರ್ದೇಶಕರು
ಶ್ರೀ ಬಾಬು, ನಿರ್ದೇಶಕರು
ಶ್ರೀ ರಾಜು ಮಹೇಂದ್ರಕರ್, ವೃತ್ತಿಪರ ನಿರ್ದೇಶಕರು, ಚಾರ್ಟರ್ಡ್ ಅಕೌಂಟೆಂಟ್
ಶ್ರೀ ನಾಗರಾಜ್ ಗೌಡನಕಟ್ಟಿ, ವ್ಯವಸ್ಥಾಪಕರು
ಶ್ರೀ ಅನಿಲ್ ಟಿ. ಮಾಳದಕರ್, ಸಹಾಯಕ ವ್ಯವಸ್ಥಾಪಕರು
ಶ್ರೀ ಕೃಷ್ಣಕಾಂತ್, ಲೆಕ್ಕಾಧಿಕಾರಿ

## ಸಾರ್ವಜನಿಕ ಪ್ರಕಟಣೆ

ನಾನು **ಶ್ರೀ ನರಸಿಂಹರಾವ್**, ವಯಸ್ಸು 48 ವರ್ಷ, ದಾವಣಗೆರೆ ಸಿಟಿ, ದಾವಣಗೆರೆ ವಾಸಿಯಾದ ಇವರು ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ:-

ನಾನು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ತೋರಿಸಿರುವ ಸ್ವತ್ತುಗಳ ವಿರುದ್ಧ ದಾವಣಗೆರೆಯ ಮಾನ್ಯ ಸಿವಿಲ್ ನ್ಯಾಯಾಧೀಶರವರ (ಕಿರಿಯ ವಿಭಾಗ) ನ್ಯಾಯಾಲಯದಲ್ಲಿ ಅಸಲು ದಾವೆ ನಂ: 235/2021 ಎಂದು ಸಲ್ಲಿಸಿದ್ದು, ಈ ಸದರಿ ದಾವೆಯನ್ನು ರಾಜು ಚಿಲಕೂರಿ ಮತ್ತು ಇತರರ ವಿರುದ್ಧ ಪಾಲು ವಿಭಾಗ ಕೋರಿ ಸಲ್ಲಿಸಿರುತ್ತೇನೆ. ಸದರಿ ದಾವೆಯಲ್ಲಿ ನಾನು ತಾತ್ಕಾಲಿಕ ನಿರ್ಬಂಧಕಾಜ್ಞೆಯ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ದಾವಣಗೆರೆ ಮಾನ್ಯ ಸಿವಿಲ್ ನ್ಯಾಯಾಧೀಶರವರ (ಕಿರಿಯ ವಿಭಾಗ) ನ್ಯಾಯಾಲಯವು ದಿನಾಂಕ: 17-04-2021 ರಂದು ಪುರಸ್ಕರಿಸಿದ್ದು, ಸದರಿ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳಲ್ಲಿ ಪ್ರತಿವಾದಿಗಳಾಗಲೀ ಮತ್ತು ಇತರೆ ಯಾರೇ ಆಗಲೀ ಪರಭಾರೆ ಮಾಡದಂತೆ ಏಕಪಕ್ಷೀಯ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶ ಮಾಡಿರುತ್ತದೆ.

ಆದ್ದರಿಂದ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ತೋರಿಸಿರುವ ಸ್ವತ್ತುಗಳನ್ನು ಯಾರೂ ಖರೀದಿ ಮಾಡಬಾರದು ಮತ್ತು ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಮಾಡದಂತೆ ಈ ನೋಟೀಸ್ ಮೂಲಕ ತಿಳಿಸಲಾಗಿದೆ. ಒಂದು ವೇಳೆ ಯಾರಾದರು ವ್ಯವಹರಿಸಿದ್ದಲ್ಲಿ ಮುಂದಿನ ಪರಿಣಾಮಕ್ಕೆ ತಾವೇ ಬಾಧ್ಯಸ್ಥರಾಗುತ್ತೀರಿ ತಿಳಿಯಿರಿ.

**ಷೆಡ್ಯೂಲ್**

1. ದಾವಣಗೆರೆ ತಾಲ್ಲೂಕ್ ಉಪ ನೋಂದಣಾಧಿಕಾರಿಗಳ ಕಛೇರಿ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕ್, ಶಾಮನೂರು ಗ್ರಾಮದ ರೀ ಸರ್ವೆ ನಂ.76/2ಎ2ರಲ್ಲಿ ವಿಸ್ತೀರ್ಣ 1 ಎಕರೆ 23 ಗುಂಟೆ ಉಳ್ಳ ಜಮೀನಿನಲ್ಲಿ ವಾಸೋಪಯೋಗಕ್ಕಾಗಿ ವಿಂಗಡಿಸಿರುವ ಈಗ ಹಾಲಿ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟ ಡೋರ್ ನಂ.3349/ಎ2 ಇದರ ಅಳತೆ: ಪೂರ್ವ-ಪಶ್ಚಿಮ:98 ಅಡಿ, ಉತ್ತರ-ದಕ್ಷಿಣ: 50 ಅಡಿ ಒಟ್ಟು 4900 ಚದುರಡಿ ಉಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ :-ಪೂರ್ವಕ್ಕೆ : 30 ಅಡಿ ಅಗಲದ ರಸ್ತೆ, ಪಶ್ಚಿಮಕ್ಕೆ: ಬೇರೆಯವರ ಬಾಬ್ತು ವಾಸೋಪಯೋಗದ ನಿವೇಶನಗಳು, ಉತ್ತರಕ್ಕೆ: ಇದೇ ಸೈಟ್ ನಂಬರ್ ಪೈಕಿ ಉಳಿದ ಖಾಲಿ ನಿವೇಶನ, ದಕ್ಷಿಣಕ್ಕೆ: ಸೈಟ್ ನಂಬರ್, ಎ3, ಡೋ.ನಂ.3350/ಎ3 ಸ್ವತ್ತು.

2. ದಾವಣಗೆರೆ ತಾಲ್ಲೂಕ್ ಉಪ ನೋಂದಣಾಧಿಕಾರಿಗಳ ಕಛೇರಿ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕ್, ಶಾಮನೂರು ಗ್ರಾಮದ ರೀ ಸರ್ವೆ ನಂ. 76/2ಎ2ರಲ್ಲಿ ವಿಸ್ತೀರ್ಣ 1 ಎಕರೆ 23 ಗುಂಟೆ ಉಳ್ಳ ಜಮೀನಿನಲ್ಲಿ ವಾಸೋಪಯೋಗಕ್ಕಾಗಿ ವಿಂಗಡಿಸಿರುವ ಈಗ ಹಾಲಿ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟ ಡೋರ್ ನಂ. 3350/ಎ3 ಇದರ ಅಳತೆ: ಪೂರ್ವ-ಪಶ್ಚಿಮ: 98 ಅಡಿ, ಉತ್ತರ-ದಕ್ಷಿಣ: 50 ಅಡಿ ಒಟ್ಟು 4900 ಚದುರಡಿ ಉಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ:- ಪೂರ್ವಕ್ಕೆ: 30 ಅಡಿ ಅಗಲದ ರಸ್ತೆ, ಪಶ್ಚಿಮಕ್ಕೆ: ಬೇರೆಯವರ ಬಾಬ್ತು ವಾಸೋಪಯೋಗದ ನಿವೇಶನಗಳು, ಉತ್ತರಕ್ಕೆ: ನಿಮ್ಮ ಬಾಬ್ತು ಖಾಲಿ ನಿವೇಶನ, ದಕ್ಷಿಣಕ್ಕೆ: 30ಅಡಿ ಅಗಲದ ರಸ್ತೆ.

**ಮಂಜುನಾಥ. ಬಿ.ಹೆಚ್.** ಬಿ.ಎ. ಎಲ್.ಎಲ್.ಬಿ
ವಕೀಲರು, ಆಲೂರು (ವಿ & ಪಿ) ದಾವಣಗೆರೆ.
ಮೊ. 9742816055

**ಕಕ್ಷಿದಾರರ ಸಹಿ**

# ಕರವೇಯಿಂದ ಪ್ರತಿಭಾನ್ವಿತರಿಗೆ 'ಜ್ಞಾನಕಾಶಿ' ಪ್ರಶಸ್ತಿ ಪ್ರದಾನ



ದಾವಣಗೆರೆ, ಅ.24- ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕ ಪಡೆದ ದಾವಣಗೆರೆ ವಲಯ ಮಟ್ಟದ 157 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ 'ಜ್ಞಾನಕಾಶಿ' ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು.

ನಗರದ ಗುರುಭವನದಲ್ಲಿ ಇಂದು ಏರ್ಪಾಡಾಗಿದ್ದ ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಹೋರಾಟದ ಜೊತೆಗೆ ಸಮಾಜಮುಖಿ ಕಾರ್ಯಗಳಲ್ಲೂ ತೊಡಗಿಸಿಕೊಳ್ಳಬೇಕು ಎಂದರು.

ನಾಡಿನ ನೆಲ, ಜಲ, ನಾಡು, ನುಡಿ ರಕ್ಷಣೆಗಾಗಿ ಕರ್ನಾಟಕದ ರಕ್ಷಣಾ ವೇದಿಕೆ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದಿದೆ. ಅದರ ಜೊತೆಗೆ ಎಸ್ಸೆಸ್ಸೆಲ್ಸಿಯಲ್ಲಿ ಕನ್ನಡ ವಿಷಯದಲ್ಲಿ ಪೂರ್ಣ ಅಂಕ ಗಳಿಸಿರುವ ಮಕ್ಕಳಿಗೆ ಪುರಸ್ಕಾರ ನೀಡುತ್ತಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ನವೆಂಬರ್ 1ರಂದು ನಡೆಯುವ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಸರ್ಕಾರಿ ಕಚೇರಿಗಳ ಮೇಲೆ ಕನ್ನಡದ ಬಾವುಟ ಹಾರಿಸಬೇಕು. ಇಲ್ಲವಾದಲ್ಲಿ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ರೈಲ್ವೆ ಇಲಾಖೆಯಲ್ಲಿ 'ಡಿ' ಗ್ರೂಪ್ ನೌಕರರ ಪರೀಕ್ಷಾ ನೇಮಕಾತಿ ಸಂದರ್ಭದಲ್ಲಿ ಉತ್ತರ ಭಾರತದ ಯುವಕರು ಬೆಂಗಳೂರಿಗೆ ಪರೀಕ್ಷೆ ಬರೆಯಲು ಆಗಮಿಸಿದ್ದರು. ಆಗ ನಮ್ಮ ರಾಜ್ಯದ ಯುವಕರು ಭಾಗವಹಿಸುವಂತೆ ಹೋರಾಟ ಮಾಡಿದ ಪರಿಣಾಮ ಸಾವಿರಾರು ಜನರಿಗೆ ಉದ್ಯೋಗ ದೊರಕಿತು. ಇದು ಕರವೇ ಮಾಡಿದ ಹೋರಾಟದ ಪ್ರತಿಫಲ ಎಂದರು.

ಬ್ಯಾಂಕ್‌ನಲ್ಲಿ ವ್ಯವಸ್ಥಾಪಕರು ಸೇರಿದಂತೆ ಎಲ್ಲಾ ಹುದ್ದೆಗಳಿಗೆ ಆಯಾಯ ರಾಜ್ಯಗಳ ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ನಡೆಸಬೇಕು ಎಂದು ಆಗ್ರಹಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಎಸ್.ವಿ. ರಾಮಚಂದ್ರಪ್ಪ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಬಿ. ವಾಮದೇವಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ನಿರಂಜನ ಮೂರ್ತಿ, ಕರವೇ ಪದಾಧಿಕಾರಿಗಳಾದ ವಾಸುದೇವ ರಾಯ್ಕರ್, ಶ್ರೀನಿವಾಸ್ ಚಿನ್ನಿಕಟ್ಟಿ, ಮಂಜುಳಮ್ಮ, ಸುರೇಶ್ ಸೇರಿದಂತೆ ಇತರರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದುರ್ಗಾಂಬಿಕ ಹೈಸ್ಕೂಲ್ ಸುತ್ತಮುತ್ತ, ಇ.ಎಸ್.ಐ. ಆಸ್ಪತ್ರೆ ಸುತ್ತಮುತ್ತ ಡಿಸಿಎಂ ಟೌನ್‌ಶಿಪ್, ಶಕ್ತಿ ನಗರ, ರಾಜೇಂದ್ರ ಬಡಾವಣೆ, ಅಂಬಿಕ ಲೇಔಟ್, ಭೂಮಿಕ ನಗರ, ಎಸ್.ಎಸ್. ಹೈಟೆಕ್ ಲೇಔಟ್ ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

## ಶಿವಮೊಗ್ಗ ಪ್ರಥಮ, ದಕ್ಷಿಣ ಕನ್ನಡ ಜಿಲ್ಲೆಗೆ ದ್ವಿತೀಯ ಸ್ಥಾನ

(1ನೇ ಪುಟದಿಂದ) ಪೊಲೀಸ್ ಉಪಾಧೀಕ್ಷಕ ನರಸಿಂಹ ತಾಮ್ರಧ್ವಜ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ವೇತನ ತಾರತಮ್ಯ ಪರಿಹರಿಸುವ ನಿಟ್ಟಿನಲ್ಲಿ ಸಂಘ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇದರಿಂದ ಪೊಲೀಸ್ ಸಿಬ್ಬಂದಿಗೂ ಅನುಕೂಲವಾಗಲಿದೆ ಎಂದರು.

ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಜಿಲ್ಲಾ ಯುವ ಸಬಲೀಕರಣ-ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಶ್ರೀನಿವಾಸ್, ತಹಶೀಲ್ದಾರ್ ಗಿರೀಶ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ ಮತ್ತಿತರರು ಉಪಸ್ಥಿತರಿದ್ದರು.



ಭದ್ರಾ ಮೇಲ್ಸೇತುವೆಯ ಕಾಲುವೆಯಿಂದ ಜಲಪಾತ ಸೃಷ್ಟಿ

ಸೂಳೆಕೆರೆ ಸಮೀಪ ಇರುವ ಭದ್ರಾ ಮೇಲ್ಸೇತುವೆ ಕಾಲುವೆಯಲ್ಲಿ ನೀರು ತುಂಬಿ ಹರಿಯುತ್ತಿದ್ದು, ಶನಿವಾರ ರಾತ್ರಿ ಜಲಪಾತ ಸೃಷ್ಟಿ ಆಗಿತ್ತು.

# ಮೇಯರ್ ವೀರೇಶ್ ಕಾರಿಗೆ ಬೈಕ್ ಸಿನಿಮೀಯ ರೀತಿ ಡಿಕ್ಕಿ

ದಾವಣಗೆರೆ, ಅ.24- ಇಲ್ಲಿನ ನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಅವರ ಕಾರಿಗೆ ಸಿನಿಮೀಯ ರೀತಿಯಲ್ಲಿ ಬೈಕ್ ಡಿಕ್ಕಿ ಹೊಡೆದ ಘಟನೆ ಜಿಲ್ಲಾಧಿಕಾರಿ ಕಚೇರಿ ಸಮೀಪದ ರಿಂಗ್ ರಸ್ತೆಯಲ್ಲಿ ನಡೆದಿದೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶನಿವಾರ ಕಿತ್ತೂರು ಚೆನ್ನಮ್ಮ ಜಯಂತಿ ಕಾರ್ಯಕ್ರಮ ಮುಗಿಸಿಕೊಂಡು ಮೇಯರ್ ವೀರೇಶ್ ತಮ್ಮ ಕಾರಿನಲ್ಲಿ ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್ ಅವರೊಟ್ಟಿಗೆ ಜಿಲ್ಲಾಸ್ಪತ್ರೆಯಲ್ಲಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಲು ತೆರಳುತ್ತಿದ್ದರು. ಈ ವೇಳೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ಮೇಯರ್ ಅವರ ಕಾರು ರಿಂಗ್ ರಸ್ತೆಯಲ್ಲಿ ಕ್ರಾಸ್ ಮಾಡುವಾಗ ಏಕಾಏಕಿ ಬಂದ ಬೈಕ್ ಕಾರಿಗೆ ಡಿಕ್ಕಿ ಹೊಡೆದಿದೆ. ಸಿನಿಮೀಯ ರೀತಿಯಲ್ಲಿ ಬೈಕ್ ಚಾಲಕ ಕಾರಿನ ಮೇಲೆ ಜಂಪ್ ಆಗಿ ಕೆಳಗೆ ಬಿದ್ದಿದ್ದಾನೆ. ಬೈಕ್ ಸವಾರ ಹೆಲ್ಮೆಟ್ ಧರಿಸಿದ್ದರಿಂದ ಹೆಚ್ಚಿನ ಅಪಾಯದಿಂದ ಪಾರಾಗಿದ್ದಾನೆ.

ಈತ ಮೆಕ್ಯಾನಿಕ್ ಆಗಿದ್ದು, ಬೈಕ್ ಪರಿಶೀಲನೆಗೆಂದು ರಸ್ತೆಯಲ್ಲಿ ವೇಗವಾಗಿ ಸಾಗುತ್ತಿದ್ದ ಕಾರಣ ಈ ಅಪಘಾತ ಸಂಭವಿಸಿದೆ. ಘಟನೆಯಿಂದ ಗಾಯಗೊಂಡ ಬೈಕ್ ಸವಾರನನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ವೀರೇಶ್ ಹಾಗೂ ದೇವರಮನೆ ಶಿವಕುಮಾರ್ ಅಪಾಯದಿಂದ ಪಾರಾಗಿದ್ದಾರೆ. ಅಪಘಾತದಿಂದ ಕಾರಿನ ಕಿಟಕಿ ಗಾಜುಗಳು ಪುಡಿಯಾಗಿ ಮೇಯರ್ ಅವರ ಕೈ ಮೈಗೆ ಚುಚ್ಚಿ ಸಣ್ಣಪುಟ್ಟ ಗಾಯಗಳಾಗಿವೆ. ಡಿಕ್ಕಿ ರಭಸಕ್ಕೆ ಮೇಯರ್ ಕಾರಿನ ಡೋರ್ ಜಖಂಗೊಂಡಿತ್ತು.

# ಕೋಡಿ ಬಿದ್ದ ಕೊಮಾರನಹಳ್ಳಿ ಕೆರೆ

## ಶಾಸಕ ಎಸ್. ರಾಮಪ್ಪನವರಿಂದ ಮಂಗಳವಾರ ಬಾಗಿನ ಅರ್ಪಣೆ



ಮಲೇಬೆನ್ನೂರು, ಅ.24- ಸತತ 2ನೇ ವರ್ಷವೂ ಕೊಮಾ ರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಐತಿಹಾಸಿಕ ಕೆರೆ ಶನಿವಾರ ರಾತ್ರಿ ಭರ್ತಿಯಾಗಿ ಕೋಡಿ ಬಿದ್ದಿದೆ.

ಕೆರೆ ಭರ್ತಿಯಾಗಿರುವುದಕ್ಕೆ ಹರ್ಷ ವ್ಯಕ್ತಪಡಿಸಿರುವ ಗ್ರಾಮಸ್ಥರು ಕೆರೆ ಅಭಿವೃದ್ಧಿಪಡಿಸಿ ಪ್ರವಾಸಿ ತಾಣವನ್ನಾಗಿ ಮಾಡಲು ಸರ್ಕಾರ ಹಾಗೂ ಶಾಸಕರು, ಸಂಸದರು, ಜಿಲ್ಲಾ ಮಂತ್ರಿಗಳು ಈಗಲಾದರೂ ಮುಂದಾಗಬೇಕೆಂದು ಒತ್ತಾಯಿಸಿದ್ದಾರೆ.

2009-10ನೇ ಸಾಲಿನಲ್ಲಿ ಈ ಕೆರೆ ಮಳೆ ನೀರಿನಿಂದಲೇ ಭರ್ತಿಯಾಗಿ ಕೋಡಿ ಬಿದ್ದಿತ್ತು. ಆಗ ಗ್ರಾಮಸ್ಥರು ಕೆರೆಯಲ್ಲಿ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿಯ ತೆಪ್ಪೋತ್ಸವವನ್ನು ಆಗಿನ ಶಾಸಕ ಬಿ.ಪಿ. ಹರೀಶ್ ಅವರ ನೇತೃತ್ವದಲ್ಲಿ ಸಂಭ್ರಮದಿಂದ ಆಚರಿಸಿದ್ದರು. ನಂತರ ಸುಮಾರು 9 ವರ್ಷ ಕೆರೆ ಮಳೆ ನೀರಿನಿಂದ ಭರ್ತಿಯಾಗಿರಲಿಲ್ಲ. ಇದನ್ನು ಮನಗಂಡ ಗ್ರಾಮಸ್ಥರು 2019 ಮತ್ತು 2020 ರಲ್ಲಿ ಭದ್ರಾ ಕಾಲುವೆಯಿಂದ ಕೆರೆಗೆ ಪಂಪ್ ಸೆಟ್‌ಗಳ ಮೂಲಕ ನೀರು ಹರಿಸಿದ್ದರು. ಕಳೆದ ವರ್ಷ ಅಕ್ಟೋಬರ್ ತಿಂಗಳಿನಲ್ಲಿ ಮಳೆ ನೀರು ಹರಿದುಬಂದ ನಂತರ ಕೆರೆ ಭರ್ತಿಯಾಗಿ ಕೋಡಿ ಬಿದ್ದಿತ್ತು. ಈ ವರ್ಷವೂ ಅಕ್ಟೋಬರ್ ತಿಂಗಳಲ್ಲೇ ಮಳೆ ನೀರಿನಿಂದ ಕೆರೆ ಸತತ 2ನೇ ಬಾರಿಗೆ ಭರ್ತಿಯಾಗಿ ಕೋಡಿ ಬಿದ್ದಿದೆ. 97 ಎಕರೆ ವಿಸ್ತೀರ್ಣ ಹೊಂದಿರುವ ಈ ಕೆರೆ ಶಿವಮೊಗ್ಗ-ಹೊಸಪೇಟೆ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವುದರಿಂದ ಎಲ್ಲರ ಗಮನ ಸೆಳೆಯುತ್ತಿದೆ.

ಸುತ್ತಲೂ ಗುಡ್ಡಗಳಿಂದ ಆವರಿಸಿರುವ ಈ ಕೆರೆಗೆ ಐತಿಹಾಸಿಕ ಹಿನ್ನೆಲೆ ಇದೆ. ಭೈರನಪಾದದಿಂದ ತುಂಗಭದ್ರಾ ನದಿ ನೀರನ್ನು ಕೆರೆಗೆ ಹರಿಸುವ ಯೋಜನೆಗೆ ಶಾಸಕ ಎಸ್. ರಾಮಪ್ಪ ಅವರು ಹೋರಾಟ ಮಾಡಿದ್ದರು. ಆದರೆ ಸರ್ಕಾರ 2019 ರಲ್ಲಿ ಹೊನ್ನಾಳಿ ತಾಲ್ಲೂಕಿನ 19 ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರು ತುಂಬಿರುವ ಬೆನಕನಹಳ್ಳಿ ಏತ ನೀರಾವರಿ ಯೋಜನೆಯಲ್ಲಿ ನಮ್ಮ ಕೊಮಾರನಹಳ್ಳಿ ಕೆರೆಯನ್ನು ಸೇರಿಸಿದೆ. ಯೋಜನೆಯ ಟೆಂಡರ್ ಕೂಡಾ ಆಗಿದ್ದು, ಶೀಘ್ರದಲ್ಲೇ ಕಾಮಗಾರಿ ಪ್ರಾರಂಭ ಆಗುವ ನಿರೀಕ್ಷೆ ಇದೆ ಎಂದು ಹರಿಹರ ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್ 'ಜನತಾವಾಣಿ'ಗೆ ಮಾಹಿತಿ ನೀಡಿದರು.

**ಶಾಸಕರಿಂದ ಬಾಗಿನ :** ಸತತ 2ನೇ ಬಾರಿಗೆ ಭರ್ತಿಯಾಗಿರುವ ಕೆರೆಗೆ ಶಾಸಕ ಎಸ್. ರಾಮಪ್ಪ ಅವರ ಸಮ್ಮುಖದಲ್ಲಿ ನಾಡಿದ್ದು ದಿನಾಂಕ 26 ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಬಾಗಿನ ಅರ್ಪಿಸಲಾಗುತ್ತದೆ.


## ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ



ಶ್ರೀಮತಿ ಕೊಟ್ರಮ್ಮ ದಿವಾಕರ್
ಗೌಳೇರ ಓಣಿ, ಹರಪನಹಳ್ಳಿ
ಮರಣ : 13.10.2021

॥ ಶ್ರೀ ಕೊಡಚಿ ವೀರಭದ್ರೇಶ್ವರ ಪ್ರಸನ್ನ ॥

ವಿಜಯನಗರ ಜಿಲ್ಲೆ, ಹರಪನಹಳ್ಳಿ ಪಟ್ಟಣ ವಾಸಿಗಳಾದ ಪುಷ್ಪಾ ದಿವಾಕರ್ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 13.10.2021ನೇ ಬುಧವಾರ ಬೆಳಗ್ಗೆ 11.10 ಗಂಟೆಗೆ ದಿ. ದಿವಾಕರ್, ವಕೀಲರು ಇವರ ಧರ್ಮಪತ್ನಿಯಾದ

**ಶ್ರೀಮತಿ ಕೊಟ್ರಮ್ಮ ದಿವಾಕರ್**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆ ಯನ್ನು**

ದಿನಾಂಕ 25.10.2021ನೇ ಸೋಮವಾರ ಬೆಳಿಗ್ಗೆ 10.30 ಗಂಟೆಗೆ ಹರಪನಹಳ್ಳಿ ಪಟ್ಟಣದ ಗೌಳೇರ ಓಣಿಯಲ್ಲಿರುವ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು : ಮೃತರ ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳು ಮತ್ತು ಮಿತ್ರರು.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte